## 5

# ರಕ್ಷಣೆಗಾಗಿ ದೇವರ ನಿತ್ಯತ್ವದ ಉದ್ದೇಶ

# (2:4-10)

ಕ್ರಿಸ್ತನನ್ನು ಅಂಗೀಕರಿಸುವ ಮೊದಲು ಎಫೆಸದವರು ಹೇಗೆ ಜೀವಿಸುತ್ತಿದ್ದರು ಎಂಬ ಕಠೋರವಾದ ಎಚ್ಚರಿಕೆಯ ನಂತರ, ಪೌಲನು ಪ್ರೋತ್ಸಾಹದಾಯಕವಾದ ಸಂದೇಶವನ್ನು ಅವರಿಗಾಗಿ ಕೊಟ್ಟನು. ಆತನು ಮಾನವನಿಗೋಸ್ಕರ ದೇವರ ಅದ್ಭುತವಾದ ರಕ್ಷಣೆಯ ಉದ್ದೇಶವನ್ನು ಅವರಿಗೆ ವಿವರಿಸಿದನು.

## ಪ್ರೀತಿಯ ಉದ್ದೇಶ (2:4)

**4ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು.**

**ವಚನ 4.** ಎಫೆಸದವರು ಪಾಪದಲ್ಲಿ ಸತ್ತವರೂ ಮತ್ತು ಶರೀರಭಾವದ ಆಶೆಗಳಲ್ಲಿ ಜೀವಿಸುವವರೂ ಆಗಿದ್ದರು ಎಂದು ಘೋಷಿಸಿದ ನಂತರ, "ಆದರೆ ... ದೇವರು" ಎನ್ನುವ ಮೂಲಕ ಪೌಲನು ದೊಡ್ಡ ನಿರೀಕ್ಷೆಯನ್ನೂ ಮತ್ತು ಸಮಾಧಾನದ ಮಾತುಗಳನ್ನು ಅವರಿಗೆ ಕೊಟ್ಟನು. **ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾಪ್ರೀತಿಯನ್ನಿಟ್ಟು ... ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು** ಎಂದು ಆತನು ಬರೆಯುತ್ತಾನೆ.

ದೇವರು ಸಂಪೂರ್ಣವಾಗಿ ಪವಿತ್ರರೂ ಆಗಿದ್ದಾನೆ. ಪ್ರಾಚೀನ ಇಸ್ರಾಯೇಲರಿಗೆ ಮತ್ತು ನಮಗೆ ಆತನ ಘೋಷಣೆಯು "ನಾನು ಪರಿಶುದ್ಧನು" ಎಂಬುದೇ ಆಗಿತ್ತು (ನೋಡಿರಿ ಯಾಜಕಕಾಂಡ 11:44, 45; 19:2; 20:26; 1 ಪೇತ್ರನು 1:16). ದೇವರು ಪರಿಶುದ್ಧನಾಗಿದ್ದುದರಿಂದ, ಆತನು ಪಾಪದೊಂದಿಗೆ ಯಾವುದೇ ಸಂಯೋಜನೆಯನ್ನು ಹೊಂದಿಲ್ಲ (ಹಬಕ್ಕೂಕ 1:13); ಆತನು ಪಾಪದ ತೀರ್ಪು ಮಾಡುವವನಾಗಿದ್ದಾನೆ (ರೋಮಾಪುರ 6:23). ಪರಿಶುದ್ಧನಾದ ದೇವರು ಪಾಪಕ್ಕೆ ತೀರ್ಪನ್ನು ಮಾಡಿದಾಗ, ಪಾಪಿಗೆ ಯೋಗ್ಯವಾದಂಥ ನ್ಯಾಯತೀರ್ಪನ್ನು ಆತನು ತರುವವನಾಗಿದ್ದಾನೆ. ಹೇಗೋ, ದೇವರು "ಕರುಣಾನಿಧಿಯು" ಮತ್ತು ತೀರ್ಪಿನ ಮಹಾ ರೋಷವನ್ನು ತಡೆಹಿಡಿಯುವವನೂ ಆಗಿದ್ದಾನೆ. ವಕೀಲನು ಕಕ್ಷಿಗಾರನಲ್ಲಿಯ ಅಪರಾಧದ ದೋಷವನ್ನು ಕಂಡುಹಿಡಿದರೂ ಕೂಡಾ ಕರುಣೆಯನ್ನು ಸೂಚಿಸುವವನಾಗಿರುತ್ತಾನೆ. ಕಕ್ಷಿಗಾರನು ದೋಷಿಯೂ ಮತ್ತು ಕಾನೂನಿನ ದಂಡನೆಗೂ ಅರ್ಹನಾಗಿದ್ದರೂ, ಕೂಡಾ ವಕೀಲನು ನ್ಯಾಯಧೀಷನಿಗೆ ಅರ್ಹವಾದ ಆತನ ದಂಡನೆಯನ್ನು ತಡೆಯಲು ಕೋರಬಹುದು. ದೇವರ ನ್ಯಾಯಾಲಯದಲ್ಲಿ ನಾವು ದೋಷಿಯಾಗಿ ಕಂಡುಬಂದಾಗ, ಮತ್ತು ನ್ಯಾಯತೀರ್ಪು ನಾವು ಮರಣಕ್ಕೆ ಯೋಗ್ಯರು ಎಂದು ಹೇಳುತ್ತದೆ. ಹೇಗೋ, ದೇವರು ತನ್ನ ಕರುಣೇಯ ಪ್ರಕಾರ ನಮ್ಮೊಡನೆ ವ್ಯವಹರಿಸಲು ಬಯಸುವವನಾಗಿದ್ದಾನೆ; ನಾವು ಅರ್ಹವಾದಂಥದ್ದರಿಂದ ನಮ್ಮನ್ನು ಬಿಡಿಸಲು ಬಯಸುವವನಾಗಿದ್ದಾನೆ. ಖಚಿತವಾಗಿ, ದೇವರು ಒಬ್ಬ ಮೊಂಡುವಾದದ ಪಾಪಿಯನ್ನು ತನ್ನ ಪಾಪದಲ್ಲಿಯೇ ಇಳಿಯಲು ಮತ್ತು ಅಂತಿಮವಾಗಿ ನಿತ್ಯವಾದ ಮರಣವನ್ನು ಪಡೆಯಲು ಇರಿಸುವವನಾಗಿದ್ದಾನೆ; ಆದರೆ ಅದನ್ನು ಒಪ್ಪಿಕೊಳ್ಳುವವರಿಗೆ ತನ್ನ ಮಹಾಕರುಣೆಯನ್ನು

ವಿಸ್ತರಿಸುವವನಾಗಿದ್ದಾನೆ.

"ಆದರೆ ... ದೇವರು" ಎಂಬ ಪದವು ಎಫೆಸದವರು ಮೊದಲು ಹೇಗಿದ್ದರು ಮತ್ತು ಈಗ ಏನಾಗಿದ್ದಾರೆ ಎಂಬುದರ ಸ್ಪಷ್ಟವಾದ ಗುರುತನ್ನು ಮಾಡುವುದಾಗಿದೆ. ಇದನ್ನು ತೆಗೆದುಕೊಳ್ಳಲು ದೇವರು ತಾನೆ ಮುಂದಾಗಿರುವುದಕ್ಕೆ ಕಾರಣ ಆತನು ಕೇವಲ ನೀತಿವಂತಿಕೆಯ ಕೋಪದ ದೇವರಲ್ಲ, ಆದರೆ ಆತನು ಮಹಾಕರುಣೆಯುಳ್ಳ ದೇವರೂ ಆಗಿದ್ದಾನೆ. ಆತನು ಮಹಾಕರುಣೆಯುಳ್ಳ ದೇವರಾಗಿದ್ದುದರಿಂದ, ತನ್ನ ಜನರನ್ನು ಪಾಪದ ಸಂಬಳದಿಂದ ಬರುವ ನಿತ್ಯಮರಣದಿಂದ ತಪ್ಪಿಸುವವನೂ, ಮತ್ತು ನಮಗೆ ಜೀವವನ್ನು ಕೊಡುವವನೂ ಆಗಿದ್ದಾನೆ. ದೇವರು ಸಂಪೂರ್ಣವಾಗಿ ಪವಿತ್ರನೂ ಆಗಿದ್ದಾನೆ.

"ನಮ್ಮ ಮೇಲೆ ಮಹಾಪ್ರೀತಿಯನ್ನಿಟ್ಟು" ಎಂಬುದು ಪಾಪದಲ್ಲಿ ಮರಣಿಸಿದವರಿಗೆ ದೇವರು ತನ್ನ ಕರುಣೆಯನ್ನು ವಿಸ್ತರಿಸಿದ ಕಾರಣವನ್ನು ವಿವರಿಸುವುದಾಗಿದೆ. ಕರುಣೆಯನ್ನು ಪಾಪಿಗಳತ್ತ ವಿಸ್ತರಿಸಲ್ಪಟ್ಟ, ಮತ್ತು ಪ್ರೀತಿಯು ಪಾಪಿಗಳಿಗಾಗಿ ಆತನು ಮಾಡಿದ್ದುದರ ಪ್ರೇರಣೆಯನ್ನು ತೋರಿಸುವ ದೇವರ ಸ್ವಭಾವವಾಗಿದೆ. ದೇವರ ಕರುಣೆಯು ಅಂತಿಶಯಾಗದೆ ಮತ್ತು ಪ್ರೀತಿಯು ಶ್ರೇಷ್ಟವಾಗಿದೆ ಎಂದು ಪೌಲನು ಹೇಳುತ್ತಾನೆ. ಇದು "ಯಾಕೆಂದರೆ" ("Because") ಎಂಬುದು *dia*ರ ಭಾಷಾಂತರವಾಗಿದೆ ಮತ್ತು "ತೃಪ್ತಿಪಡಿಸುವ ನಿಟ್ಟಿನಲ್ಲಿ" ಎಂಬ ಅರ್ಥವನ್ನು ಕೊಡುವುದಾಗಿದೆ[1]; ದೇವರು ತನ್ನ ಶ್ರೇಷ್ಟಪ್ರೀತಿಯನ್ನು ಸಂತೃಪ್ತಿಪಡಿಸುವ ನಿಟ್ಟಿನಲ್ಲಿ ತನ್ನ ಕರುಣೆಯನ್ನು ವಿಸ್ತರಿಸಿದನು.

"ಪ್ರೀತಿ" ಎಂಬುದಕ್ಕೆ ಇಂಗ್ಲೀಷನಲ್ಲಿ ಇರುವ ಹಾಗೆ ಗ್ರೀಕರಲ್ಲಿ ಒಂದೇ ಪದವಿಲ್ಲ, ಆದರೆ ನಾಲ್ಕು ಇವೆ. ವಿಲಿಯಂ ಬಾರ್ಕ್ಲೆ ಈ ನಾಲ್ಕುಪದಗಳನ್ನು ಚೆನ್ನಾಗಿ ವಿವರಿಸಿದ್ದಾರೆ.[2] (1) *Erōs* ಎಂಬ ಪದವು ಮುಖ್ಯವಾಗಿ ಸಜಾತಿಯ ಮಧ್ಯದ ಪ್ರೀತಿಯನ್ನು ಅಥವಾ ದೈಹಿಕ ಪ್ರೀತಿಯನ್ನು ಸೂಚಿಸುವುದಾಗಿದೆ. ಈ ಪದವು ಶರೀರಭಾವದ ಆಶೆಯನ್ನು ಒಳಗೊಂಡಿದ್ದನ್ನು ಕೆಡಿಸುವಂತದ್ದಾಗಿವೆ ಮತ್ತು ಇವು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವದಿಲ್ಲ. (2) *Storgē* ಎಂಬ ಪದವು ಕುಟುಂಬ ವಾತ್ಸಲ್ಯದೊಡನೆ ಸೇರಿರುವಂತದ್ದಾಗಿದೆ ಮತ್ತು ಮಕ್ಕಳಿಗಾಗಿನ ಪೋಷಕರ ಪ್ರೇಮ ಮತ್ತು ಪೋಷಕರಿಗಾಗಿನ ಮಕ್ಕಳ ಪ್ರೇಮ ಇವುಗಳಿಗಾಗಿ ಬಳಸಲ್ಪಡುವುದು ಆಗಿದೆ. ಇದು ರೋಮಾಪುರ 12:10ರಲ್ಲಿ ವಿಶೇಷದ ರೀತಿಯಲ್ಲಿ "ಅರ್ಪಿಸಿಕೊಂಡ" ("ಕರುಣೆಯುಳ್ಳ - ವಾತ್ಸಲ್ಯಭರಿತ"; KJV) ಎಂಬರ್ಥದಲ್ಲಿ ಸಿಕ್ಕುವುದಾಗಿದೆ. (3) *Philia* ಎಂಬ ಪದವು ಗಂಡ ಮತ್ತು ಹೆಂಡತಿಯ ಮಧ್ಯದ ಮತ್ತು ಸ್ನೇಹಿತರ ಮಧ್ಯದ ಪ್ರೀತಿಯ ಬಗ್ಗೆ ಮಾತನಾಡುವುದಾಗಿದೆ. ಇದು ಲಾಝರನ ಬಗೆಗಿನ (ಯೋಹಾನ 11:3, 36) ಮತ್ತು ಯೋಹಾನನಿಗೋಸ್ಕರದ (ಯೋಹಾನ 20:2). ಯೇಸುವಿನ ಪ್ರೀತಿಯನ್ನು ಅದರಂತೆಯೆ ತಂದೆಯ, ತಾಯಿಯ, ಮಗನ ಮತ್ತು ಮಗಳ ಪ್ರೀತಿಯನ್ನು ವರ್ಣಿಸುವುದಾಗಿದೆ (ಮತ್ತಾಯ 10:37). (4) ಹೊಸ ಒಡಂಬಡಿಕೆಯಲ್ಲಿ ಪ್ರೀತಿಗೆ ಬಲು ಸಾಮಾನ್ಯವಾಗಿ ಭಾಷಾಂತರಿತವಾದ ಪದವು *agapē*. ಈ ಪದವು ಶಾಸ್ತ್ರೀಯ ಗ್ರೀಕದಲ್ಲಿ ಬಳಿಕೆಯಲಿಲ್ಲ, ಆದರೆ ಹೊಸ ಒಡಂಬಡಿಕೆಯ "ಪ್ರೀತಿ" ಎಂಬ ಪದಕ್ಕೆ ಮೂಲವಾಗಿ ಇರುವುದಾಗಿದೆ.

*Agapē* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 250ಕ್ಕಿಂತಲೂ ಹೆಚ್ಚು ಸಾರಿ ಅದರ ನಾಮಪದದ ಕ್ರಿಯಾಪದದ ರೀತಿಯಲ್ಲಿ ಸಿಕ್ಕುವುದಾಗಿದೆ. ಇದು "ಪ್ರೀತಿ" ಎಂಬುದಕ್ಕೆ ಬಲು ಮುಖ್ಯವಾದ ಪದವಾಗಿದೆ ಯಾಕೆಂದರೆ ಹೊಸ ಒಡಂಬಡಿಕೆಯಲ್ಲಿ ಪ್ರೀತಿ ಎಂಬ ಪದದ ಪರಿಕಲ್ಪನೆಯನ್ನು ಸೂಚಿಸುವಂತದ್ದು ಎಲ್ಲವನ್ನು ಸೇರಿಸುವದಕ್ಕಿಂತಲೂ ಹೆಚ್ಚಾದಂಥ ಒಂದೇ ಒಂದು ಪದವಾಗಿದೆ. ದೇವರು ತಿಳಿಸಲು ಬಯಸುವಂಥದ್ದನ್ನು ವ್ಯಕ್ತಪಡಿಸಲು ಶಕ್ತವಾಗಿರುವದು *agapē* ಒಂದೇ ಆಗಿದೆ. *Agapē*ಯು ಸ್ನೇಹಿತರು ಮತ್ತು ವೈರಿಗಳನ್ನು ಒಳಗೊಂಡ ಅರ್ಥಕ್ಕಿಂತಲೂ ದೊಡ್ಡದ್ದಾಗಿದೆ. "ಪ್ರೀತಿ" ಗಾಗಿನ ಇತರ ಪದಗಳು ಇಂಥಹ ಅನೆಪೇಕ್ಷಿತ ಉದ್ವೋಗಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸುವಾಗ - "ಪ್ರೀತಿಯಲ್ಲಿ

ಜೀಳುವದು'' ಅಥವಾ ಮಗುವಿಗಾಗಿ ತಾಯಿಯ ಸ್ವಾಭಾವಿಕ ಪ್ರೀತಿ ಇಂಥ ಚಿತ್ತವನ್ನು ಒಳಗೊಂಡ *agapē* ಆಗಿದೆ. ಈ ಪ್ರೀತಿಯು ಪೂರ್ವಯೋಜಿತ ನಿರ್ಧಾರದ, ಒಬ್ಬರನ್ನು ಇನ್ನೊಬ್ಬರು ಪ್ರೀತಿಸುವುದಕ್ಕೆ ಒಳಪಡಿಸುವ ಮತ್ತು ಏನೆ ಆದರೂ ಒಳ್ಳೆಯದನ್ನೇ ಎದುರುನೋಡುವ ಆತ್ಮದ ಪರಿಣಾಮಗಳಾಗಿದೆ. *Agapē* ಯು "ಅತಿಕ್ರಮಿಸದ ಸೌಜನ್ಯದ ಮತ್ತು ಅಜೇಯವಾದ ಒಳ್ಳೆಯತನವಾಗಿದೆ."[3] ಮನುಷ್ಯರಿಗಾಗಿನ ದೇವರ ಈ ಪ್ರೀತಿಯು ಸಾರ್ವತ್ರಿಕವಾದದ್ದು ಮತ್ತು ತ್ಯಾಗಮಯವಾದದ್ದು (ಯೋಹಾನ 3:16), ಹೋಲಿಕೆಗೆ ಮೀರಿದ್ದು (ರೋಮಾಪುರ 5:8) ರಕ್ಷಿಸುವದು ಮತ್ತು ಪವಿತ್ರಗೊಳಿಸುವುದು (2 ಥೆಸಲೋನಿಕ 2:13) ಆಗಿದೆ ಎಂದು ಹೊಸ ಒಡಂಬಡಿಕೆಯು ಬೋಧಿಸುವುದಾಗಿದೆ. ಎಫೆಸ 2:4ರಲ್ಲಿ ಅದರ ಕರುಣಾಪೂರಿತ ಪ್ರೀತಿಯು ವ್ಯಕ್ತವಾಗಿದೆ. *Agapē*ಯು ಪಾಪಿಗಳಿಗಾಗಿ ದೇವರು ಮಾಡಿದಕ್ಕೆ ಪ್ರೇರಣೆಯು ಆಗಿದೆ.

## ಜೀವಿತದ ಉದ್ದೇಶ (2:5)

**[5]ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ.)**

**ವಚನ 5.** ಈ ವಚನಗಳಲ್ಲಿರುವಂತೆ, ಪೌಲನು ಮುಂದೆ ಜನರಿಗೋಸ್ಕರ ದೇವರ ಕೃಪಾಭರಿತ ಕರುಣೆಯುಳ್ಳ ಪ್ರೀತಿಯನ್ನು ವಿವರಿಸುತ್ತಾನೆ. ವಚನ 1ರಲ್ಲಿ ಪೌಲನು ಆತ್ಮೀಕ ಮರಣದ ಸ್ಥಿತಿಯ ಬಗ್ಗೆ ಒತ್ತಿಹೇಳುತ್ತಾನೆ ಮತ್ತು ಅದು ಪಾಪಿಗಳು [ತಮ್ಮ] **ಅಪರಾಧಗಳಲ್ಲಿ** ಮರಣಿಸುವುದು ಆಗಿದೆ. ಅಂಥ ಪಾಪಿಗಳಿಗೆ, ದೇವರು ತನ್ನ ಕರುಣೆಯನ್ನೂ ಮತ್ತು ಪ್ರೀತಿಯನ್ನೂ ವಿಸ್ತರಿಸಿದ್ದಾನೆ. *Paraptōma*ಗಾಗಿನ ಭಾಷಾಂತರವಾದ "ಅಪರಾಧಳು" ಎಂಬ ಗ್ರೀಕ್ ಪದವು ಇಲ್ಲಿ ವಚನ 1ರಲ್ಲಿ "ಅವಿಧೇಯತೆ" ("trespasses") ಎಂದು ಭಾಷಾಂತರವಾಗಿದೆ. **ಸತ್ತವರಾಗಿದ್ದ ನಮ್ಮನ್ನು** ಎಂಬುದು ಎಲ್ಲಪಾಪಿಗಳಿಗೆ ದೇವರ ವಿಸ್ತರಿಸಲ್ಪಟ್ಟ ಪ್ರೀತಿ ಮತ್ತು ತೋರಿಸಲ್ಪಟ್ಟ ಕರುಣೆಯನ್ನು ತೋರಿಸುವುದಾಗಿದೆ. ಇನ್ನೂ ಪಾಪಮಯ ಸ್ಥಿತಿಯಲ್ಲಿರುವಂಥ ಪಾಪಿಗಳನ್ನು ರಕ್ಷಿಸಲು ಅವಶ್ಯವಾದ ಎಲ್ಲವನ್ನೂ ದೇವರು ಮಾಡಿದನು ಮತ್ತು ನಿರ್ವಹಿಸಿದನು.

ಈ ಪಾಪಿಗಳಿಗಾಗಿ ಆತನು ಏನು ಮಾಡಿದನು? ಆತನು **ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು.** ದೇವರು ನಮಗೆ ಕ್ರಿಸ್ತನಲ್ಲಿ ಆತ್ಮೀಕ ಜೀವಿತವನ್ನು ಒದಗಿಸಿದನು. ಆತ್ಮೀಕ ಮರಣವು ದೇವರಿಂದ ಬೇರೆಯಾಗುವುದಾಗಿದ್ದಾರೆ (ನೋಡಿರಿ 2:1), ಆಗ ಆತ್ಮೀಕ ಜೀವಿತವು ದೇವರೊಂದಿಗಿನ ಮರುಹೊಂದಾಣಿಕೆಯಾಗಿದೆ. ಕ್ರಿಸ್ತನು ಸಂಧಾನಕಾರನಾಗಿದ್ದಾನೆ. "ಕ್ರಿಸ್ತನ ರಕ್ತವು" (2:13), ಅದೇ ಕ್ರಿಸ್ತನ ಶಿಲುಬೆಗೇರಿಸುವುಕೆಯು, ಕ್ರಿಸ್ತನು ನಮ್ಮ "ಸಂಧಾನಕಾರ"ನಾಗುವಂತೆ ದೇವರಿಗೆ ಸಾಧ್ಯಮಾಡಿತು ಎಂದು ಪೌಲನು ಹೇಳುತ್ತಾನೆ (2:16). ನಾವು ಪಾಪಕ್ಕಾಗಿ ಸತ್ತಾಗ, ಕ್ರಿಸ್ತನಲ್ಲಿ ದೀಕ್ಷಾಸ್ನಾನಹೊಂದಿ ಮತ್ತು ಎಬ್ಬಿಸಲ್ಪಟ್ಟು ಹೊಸದಾದ ಜೀವಿತದಲ್ಲಿ ನಡೆಯುವವನಾಗಿರುತ್ತೇವೆ (ರೋಮಾಪುರ 6:1-4). ಕ್ರೈಸ್ತರು ಕ್ರಿಸ್ತನ ಮರಣ ಮತ್ತು ಆತನ ಪುನರುತ್ಥಾನಗಳಲ್ಲಿ ಗುರುತಿಸಲ್ಪಡುತ್ತಾರೆ. ಇದೇ ರೀತಿಯಲ್ಲಿಯೇ ನಾವು ಹೊಸಜೀವಿತವನ್ನು ಪಡೆದುಕೊಳ್ಳುವುದಾಗಿದೆ. ಗಲಾತ್ಯ 2:20ರಲ್ಲಿ "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" ಎಂದು ಹೇಳುವಲ್ಲಿ ಈ ವಿಚಾರವನ್ನು ಪೌಲನು ಹಿಡಿದುಕೊಂಡಿದ್ದಾನೆ. ಕ್ರಿಸ್ತನ ಮರಣದಲ್ಲಿ ನಮ್ಮ ಗುರುತಿಸಿಕೊಳ್ಳುವಿಕೆಯು ಶಾಶ್ವತವಾಗಿರುವ ಪಾಪದ ಶಕ್ತಿಯನ್ನು ಮುರಿಯುವುದಾಗಿದೆ. ಆತನಲ್ಲಿಯ ನಮ್ಮ ಗುರುತಿಸಿಕೊಳ್ಳುವಿಕೆಯು ಆತನ ಪುನರುತ್ಥಾನವು ದಿವ್ಯ ಜೀವಿತದಲ್ಲಿ ಸಾಗುವ ಪರಿಣಾಮದೊಂದಿಗೆ ಇರುವುದಾಗಿದೆ.[4]

ಮನುಕುಲಕ್ಕಾಗಿ ದೇವರ ಶ್ರೇಷ್ಟ ಪ್ರೀತಿಯ ಕಾರಣದಿಂದ ಆತನು ಪಾಪಿಗಳಿಗೆ ತಾನೇ ಸಂಧಾನವಾದನು ಮತ್ತು ನಮಗೆ ಆತ್ಮೀಕ ಜೀವಿತವನ್ನು ಕೊಟ್ಟನು. ಪೌಲನು ಕೊರಿಂಥ 5:17, 18ರಲ್ಲಿ ಈ ರೀತಿಯಾಗಿ ಹೇಳಿದ್ದಾನೆ: "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇದೆಲ್ಲಾ ದೇವರಿಂದ ಉಂಟಾದದ್ದು ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ..."

ಕೊಲೊಸ್ಸೆ 2:12, 13ರಲ್ಲಿ, ಕೊಲಸ್ಸೆಯವರು ತಮ್ಮ ಅಪರಾಧಗಳಲ್ಲಿ ಮರಣದಿಂದ ಜೀವಿತರಾಗಿ ಮಾಡಲ್ಪಟ್ಟಾಗ; ಅವರು ದೀಕ್ಷಾಸ್ನಾನ ಹೊಂದಿದಾಗ ದೇವರು ಅವರನ್ನು ಕ್ಷಮಿಸಿದನು ಎಂಬುದನ್ನು ಹೇಳಿದಂತೆಯೇ ಪೌಲನು ಮುಂದೆ ಆ ವಿಚಾರವನ್ನು ವಿವರಿಸಿದನು. ಇದೆಲ್ಲವನ್ನೂ ಮಾಡಲು ಸಾಧ್ಯವಾದ್ದದರ ಮೂಲಕ ದೇವರ ಶ್ರೇಷ್ಟ ಪ್ರೀತಿಯು ಪ್ರೇರೇಪಿಸಲ್ಪಟ್ಟಿತ್ತು.

**ದೇವರ ಕರುಣೆ** ಮತ್ತು ಪ್ರೀತಿಯು ಆತನ ಕೃಪೆಯ ಮೂಲಕ ಮಾನವನಿಗೆ ಬಂತು. "ಕೃಪೆ" ಎಂಬ ಪದವು ಗ್ರೀಕನಲ್ಲಿ, ನಾಮಪದವಾದ *charis* ಎಂದಾಗಿದ್ದು "ಸಂಪಾದಿಸಿದ ಮತ್ತು ಮೌಲ್ಯರಹಿತ ಪದವಾದ" ಎಂಬರ್ಥವನ್ನು ಹೊಂದಿದ್ದು ಕ್ಷಮಾಪಣೆಯ ಸಂತೋಷವನ್ನೂ ಮತ್ತು ಕೃತಜ್ಞತೆಯನ್ನು ತರುವಂಥದ್ದಾಗಿದೆ.[5] "ಕೃಪೆ"ಯು ರಕ್ಷಣೆಯ ದಿವ್ಯ ಮದ್ಯಸ್ಥಿಕೆಯ ಬಗ್ಗೆ ಮಾತನಾಡುವುದಾಗಿದೆ. ನಾವು ಒಳ್ಳೆಯರಾಗಿದ್ದೇವೆ ಅಥವಾ ಒಳ್ಳೆಯ ಕಾರ್ಯಗಳನ್ನು ಮಾಡುತ್ತೇವೆ ಎಂಬುದಕ್ಕಾಗಿ ಇದು ಕೊಡಲ್ಪಟ್ಟಿಲ್ಲ, ಆದರೆ ದೇವರ ಕೃಪೆಯ ಕಾರಣದಿಂದಲೇ. ರಕ್ಷಣೆಯು ಸಂಪಾದಿಸುವಂಥದ್ದು, ಹೊಂದುವಂಥದ್ದು, ಅಥವಾ ಅರ್ಹವಾದದ್ದು ಆಗಿದ್ದಾದರೆ, ಇದು ಕೃಪೆಯ ಮೂಲಕ ಇರುತ್ತಿರಲಿಲ್ಲ. ಅತಿರೇಕವಾದದ್ದಕ್ಕೆ ಹೋಗದೆ ಗ್ರಹಿಸುವದು ಅನೇಕ ಜನರಿಗೆ ಕಷ್ಟವಾದದ್ದಾಗಿದೆ. ರಕ್ಷಣೆಯು ಕೃಪೆಯ ಮೂಲಕ ಇರುವುದ್ದಾದರೆ, ರಕ್ಷಣೆಯ ಮೂಲಕ ಇದನ್ನು ನಾವು ಪಡೆಯಬೇಕಾಗಿಲ್ಲ ಎಂದು ಕೆಲವರು ಹೇಳಬಹುದು. ಹೇಗೋ, ಬೈಬಲ್ ಎಂದಿಗೂ ಇದನ್ನು ಹೇಳುವುದಿಲ್ಲ. ರಕ್ಷಣೆಯನ್ನು ಹೊಂದುವುದಕ್ಕಾಗಿ ನಾವು ಸಾಕಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಲೇಬೇಕು ಎಂದು ಇತರರು ಹೇಳಬಹುದು. ನಮ್ಮ ಕೆಟ್ಟಕಾರ್ಯಗಳನ್ನು ನಮ್ಮ ಒಳ್ಳೆಯ ಕಾರ್ಯಗಳು ಪ್ರಾಧಾನ್ಯದಲ್ಲಿ ಮೀರಿಸುವುದಾದರೆ ಮಾತ್ರ ರಕ್ಷಣೆ ಹೊಂದಬಹುದು ಎಂದು ಅವರು ಸ್ಪಷ್ಟವಾಗಿ ಯೋಚಿಸುವವರಾಗಿದ್ದಾರೆ. ಈ ದೃಷ್ಟಿಯು ಒಂದು ಪಾಪವೂ ಕೂಡಾ ಆಗಿದ್ದು ದೇವರ ಕೃಪೆಯ ಯೋಗ್ಯ ಸಂಬಂಧವನ್ನು ಸಂಪಾದಿಸುವುದಕ್ಕಾಗಿ ಮಾಡುವ ಕಾರ್ಯದಿಂದ ಅನರ್ಹರನ್ನಾಗಿಸಬಹುದು ಎಂದು ಗ್ರಹಿಸುವುದಿಲ್ಲ ಅಥವಾ ಗುರುತಿಸುವದಿಲ್ಲ. ನಂತರ, ವಚನ 8 ಮತ್ತು 9ರಲ್ಲಿ ಪೌಲನು ದೇವರ ಕೃಪೆಗೆ ನಾವು ಹೇಗೆ ಪ್ರತಿಕ್ರಯಿಸಬೇಕೆಂದು ಪೌಲನು ಹೆಳುತ್ತಾನೆ.

**ರಕ್ಷಣೆ ಹೊಂದಿದವರಾಗಿದ್ದೀರಿ** ಎಂಬುದು ಒಂದು ಗ್ರೀಕ್‌ದಲ್ಲಿ ನಿರ್ದಿಷ್ಟವಾದ ಕರ್ಮಣಿ ಕೃದಾಂತವಾಗಿದ್ದು; ಹಿಂದಿನ ದಿನದಲ್ಲಿ ನಡೆದ ಕಾರ್ಯಗಳ ಪರಿಣಾಮಗಳನ್ನು ಅದು ಸೂಚಿಸುವುದಾಗಿದ್ದು ಅದು ಇಂದಿನ ಹಾಗೂ ಮುಂದಿನ ದಿನಗಳಿಗೂ ಪರಿಣಾಮವನ್ನು ಬೀರುವಂಥದ್ದಾಗಿದೆ. ರಕ್ಷಣೆಯು ನಮಗಾಗಿ ಮಾಡಿದಂಥದ್ದು ಮತ್ತು ನಮಗೋಸ್ಕರ ನಾವು ಮಾಡುವಂಥದ್ದು ಆಗಿದೆ ಎಂದು ಕರ್ಮಣಿಪ್ರಯೋಗ ಬಳಿಕೆಯು ಇಲ್ಲಿ ತೋರಿಸುವದಾಗಿದೆ. ನಾವು ದೇವರ ಮೇಲೆ ಆತುಕೊಂಡವರಾಗಿದ್ದೇವೆ. ಈ ಸಂದರ್ಭದಲ್ಲಿ ಪೌಲನು ಭೂತಕಾಲ, ಭವಿಷ್ಯತ್ ಕಾಲ ಮತ್ತು ವರ್ತಮಾನಕಾಲದ ರಕ್ಷಣೆಯ ಬಗ್ಗೆ ಮಾತನಾಡುತ್ತಿದ್ದಾನೆ. ನಾವು (ಭೂತಕಾಲದಲ್ಲಿ) ರಕ್ಷಿಸಲ್ಪಟ್ಟವರಾಗಿದ್ದೆವು, ನಾವು ಆತ್ಮೀಕ ರಾಜ್ಯದಲ್ಲಿ ಕ್ರಿಸ್ತನೊಡನೆ ಕೂತಿದ್ದೇವೆ (ವರ್ತಮಾನಕಾಲ), ಮತ್ತು ನಾವು ಬರುವಕಾಲದಲ್ಲಿ ದೇವರ ಕರುಣೆಯನ್ನು ಪಡೆದುಕೊಳ್ಳುವವರಾಗುವೆವು (ಭವಿಷತ್ ಕಾಲ). ಭೂತಕಾಲದಲ್ಲಿ ಕ್ರೈಸ್ತನು ನ್ಯಾಯತೀರ್ಪಿಗೆ ಒಳಪಟ್ಟಿದ್ದನು, ವರ್ತಮಾನಕಾಲದಲ್ಲಿ ಆತನು ಕ್ರಿಸ್ತನ ಪ್ರತಿರೂಪದಲ್ಲಿ ಬೆಳೆಯುವನು, ಮತ್ತು ಭವಿಷತ್‌ಕಾಲದಲ್ಲಿ ಆತನು ಮಹಿಮೆಪಡಿಸಲ್ಪಡುವನು.

## ಸತ್ಕಾರ್ಯಗಳ ಉದ್ದೇಶ (2:6-10)

**[6-7]ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ. [8]ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಟಾದದ್ದಲ್ಲ, ಅದು ದೇವರ ವರವೇ. [9]ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. [10]ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

**ವಚನಗಳು 6-7.** ನಮ್ಮ ರಕ್ಷಣೆ ಒದಗಿಸುವಿಕೆಗೆ ಜೊತೆಯಾಗಿ, ದೇವರು ನಮಗಾಗಿ ಸಮೃದ್ಧವಾದ ಮತ್ತು ಮಹಿಮಾಯುತವಾದ ಸ್ವಾಮ್ಯವನ್ನು ಸಿದ್ದಮಾಡಿದನು (ನೋಡಿರಿ 1:18).

ದೇವರ ಕ್ರೈಸ್ತರನ್ನು "ಕ್ರಿಸ್ತನೊಡನೆ ಸಜೀವವಾಗಿರುವಂತೆ" ಮಾಡಿದನು (2:5) ಮತ್ತು ಆತನೊಂದಿಗೆ ಎಬ್ಬಿಸಿದನು. ರೋಮಾಪುರ 6:1-18ರಲ್ಲಿ ಈ ವಿಷಯವನ್ನು ಕೆಲ ವಿವರಣೆಯೊಂದಿಗೆ ಪೌಲನು ಮಂಡಿಸಿದ್ದಾನೆ. (1) ಆತನು ಹೇಳಿದ ಪ್ರಕಾರ ಕ್ರೈಸ್ತನು ಪಾಪಕ್ಕಾಗಿ ಸತ್ತಿದ್ದಾನೆ, ವಾಸ್ತವದಲ್ಲಿ ಸೂಚಿಸಿದ ಪ್ರಕಾರ ಆತನು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟನು ಮತ್ತು ಹೊಸಜೀವಿತದೊಂದಿಗೆ ಆತನು ಎಬ್ಬಿಸಲ್ಪಟ್ಟನು. (2) ಕ್ರೈಸ್ತನು ಕ್ರಿಸ್ತನೊಂದಿಗೆ ಮರಣಹೊಂದಿದ್ದಾನೆ ಮತ್ತು ಆತನು ಇನ್ನು ಮುಂದೆ ಪಾಪಕ್ಕೆ ದಾಸನಾಗಿರಲಾರ. (3) ಕ್ರೈಸ್ತನು ತನ್ನನ್ನು ತಾನು ಪಾಪಕ್ಕೆ ಸತ್ತವನೆಂದು ಮತ್ತು ದೇವರೊಂದಿಗೆ ಜೀವಿಸುವವನು ಎಂದು ಪರಿಗಣಿಸಲ್ಪಡುವವನು. (4) ಕ್ರೈಸ್ತನು ತನ್ನನ್ನು ತಾನು ಆತ್ಮೀಕ ಮರಣದಿಂದ ಜೀವಿತನಾಗಿರುವವನು ಎಂದು ತನ್ನನ್ನು ತಾನು ದೇವರಿಗೆ ಸಮರ್ಪಿಸಿಕೊಳ್ಳುವವನಾಗಿದ್ದಾನೆ. (5) ಕ್ರಿಸ್ತನು ಪಾಪವು ತರುವ ಮರಣದಿಂದ ಮುಕ್ತಿ ಹೊಂದಿದವನಾಗಿರುವನು ಮತ್ತು ನೀತಿವಂತಿಕೆಯ ದಾಸನಾಗಿ ಜೀವಿಸುವವನಾಗಿರುವನು ಯಾಕೆಂದರೆ ಆತನು "ಕಲಿಸಲ್ಪಟ್ಟ ಬೋಧನೆಗೆ ಮನಃಪೂರ್ವಕವಾಗಿ ಅಧೀನರಾಗಿರುವುದರಿಂದ" ಆತನಲ್ಲಿ ಬಿಡುಗಡೆಯನ್ನು ಹೊಂದುವವನು (ರೋಮಾಪುರ 6:17).

ಕ್ರೈಸ್ತರಿಗೆ ರೋಮಾಪುರ ಪತ್ರಿಕೆಯಲ್ಲಿ ಮಂಡಿಸಲಾದ ಸಿದ್ಧಾಂತದ ರೀತಿಯ ಸತ್ಯವನ್ನು ಪೌಲನು ತಾನು ಎಲ್ಲೆ ಹೋಗುತ್ತಾನೋ ಎಲ್ಲಡೆಯೂ ಸಾರಿದನು: "... ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3, 4). ಈ ಸಿದ್ಧಾಂತವು ಎಲ್ಲಿ ಸುರಿಯಲ್ಪಟ್ಟಿತೋ ಅಲ್ಲಿ ಮಾದರಿಯಾಗಿದೆ ಅಥವಾ ನಮೂನೆಯಾಗಿದೆ. ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತಂತೆಯೇ, ರೋಮನ್ನರು ಹೊಸಜೀವಿತದಲ್ಲಿ ಎಬ್ಬಿಸಲ್ಪಟ್ಟರು (ರೋಮಾಪುರ 6:1-6). ಮಾತನಾಡುವ ರೀತಿಯಲ್ಲಿ, ಅವರು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟರು.

ಕೊಲೊಸ್ಸೆ 2:12 ಮತ್ತು 3:1ರಲ್ಲಿ ಪೌಲನು ಕೊಲಸ್ಸೆಯವರು "ಆತನೊಂದಿಗೆ ದೀಕ್ಷಾಸ್ನಾನದಲ್ಲಿ ಹೂಣಲ್ಪಟ್ಟರು" ಮತ್ತು "ದೇವರ ಕಾರ್ಯದಲ್ಲಿ ನಂಬಿಕೆಯಿಡುವ ಮೂಲಕ ಆತನೊಡನೆ ಎಬ್ಬಿಸಲ್ಪಟ್ಟರು" ಎಂದು ವರ್ಣಿಸುವಾಗ ಈ ವಿಚಾರವನ್ನು ಹಿಡಿದುಕೊಂಡಿದ್ದಾನೆ. ದೀಕ್ಷಾಸ್ನಾನದ ವಿಚಾರದಲ್ಲಿ, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವವನು" ಎಂಬ ತನ್ನ ವಾಗ್ದಾನಕ್ಕನುಗುಣವಾಗಿ ದೇವರು ಕಾರ್ಯಮಾಡಿದ್ದಾನೆ ಎಂಬಲ್ಲಿ ಅವರು ತಮ್ಮ ನಂಬಿಕೆಯನ್ನು ಪ್ರಾಯೋಗಿಸಿದ್ದಾರೆ. "ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ

ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ'' ಎಂದು ಪೌಲನು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟವರಿಗೆ ಒತ್ತಾಯಿಸಿದ್ದಾನೆ (ಕೊಲೊಸ್ಸೆ 3:1).

ಇತರ ಕ್ರೈಸ್ತರಿಗೂ ಇರುವಂತೆ **ಕ್ರಿಸ್ತ ಯೇಸುವಿನಲ್ಲಿ** ಎಫೆಸದವರಿಗೆ ಇಡಲ್ಪಟ್ಟ ದೀಕ್ಷಾಸ್ನಾನವು ಸತ್ಯವಾಗಿದೆ. ಅವರು ಆತನೊಂದಿಗೆ ಎಬ್ಬಿಸಲ್ಪಟ್ಟು ಆತ್ಮೀಕ ರಾಜ್ಯದಲ್ಲಿ **ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ** (ನೋಡಿರಿ 1:3). ಅವರು ಈಗಾಗಲೇ ಕ್ರೈಸ್ತರಾಗಿದ್ದು ಮತ್ತು ತಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟವರೂ, ಮಾಡುವ ಕಾರ್ಯವೂ ಇನ್ನೂ ಉಳಿದಿದೆ ಮತ್ತು ಹೋರಾಡಬೇಕಾದ ಹೋರಾಟವು ಮಾಡಬೇಕಾಗಿದೆ ಅದು ''ಪರಲೋಕದಲ್ಲಿ'' ಎಂಬುದಕ್ಕೆ ಇರುವ ಆಧಾರವನ್ನು ನೆನಿಸುವ ಕಾರ್ಯವನ್ನು ಮಾಡುವುದಾಗಿದೆ. ಇದರಲ್ಲಿನ ಸುವಾರ್ತೆಯು ಪರಲೋಕದ್ದಾಗಿದೆ ಎಂದು ಸಭೆಯು ಇನ್ನೂ ಗುರುತಿಸಲ್ಪಡುವುದು ಆಗಿದೆ (6:10-12).

ಪೌಲನ ಪ್ರಕಾರ, **ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು** ದೇವರು ತನ್ನ ಭಕ್ತರನ್ನು ರಕ್ಷಿಸಿದನು ಮತ್ತು ಸಜೀವವಾಗಿ ಮಾಡಿದನು (2:7). ನಿಶ್ಚಯವಾಗಿ, ರಕ್ಷಣೆಯು ಮನುಕುಲಕೋಸ್ಕರ ಒಳ್ಳೆಯದಾಗಿದೆ, ದೇವರ ಸ್ತೋತ್ರಕೋಸ್ಕರವೂ ಸಹ ಇದೆ (1:6, 12, 14). ಇದಕ್ಕೆ ಜೊತೆಯಾಗಿಯೇ, ಮನುಕುಲದ ರಕ್ಷಣೆಯ ರಕ್ಷಣೆಗೋಸ್ಕರ ಆತನ ಕರುಣೇಯ ಎಷ್ಟು ಅಪಾರವಾದ ಕೃಪೆಯು ಆಗಿದೆ ಎಂದು ''ತೋರಿಸಲು'' ದೇವರಿಗೆ ಅವಕಾಶ ಕೊಡುವುದಾಗಿದೆ. ''ಮಂದಣಯುಗಗಳಲ್ಲಿ'' ಎಂಬುದು ಕಾಲದ ಆಚೆಯ ಕ್ರಿಸ್ತನ ಎರಡನೆಯ ಬರೋಣ, ಮರಣದಿಂದ ಪುನರುತ್ಥಾನದತ್ತ, ಮತ್ತು ನ್ಯಾಯತೀರ್ಪನ್ನು ಸೂಚಿಸುವತ್ತ, ಜೊತೆಯಲ್ಲಿ ನಡೆಸುವುದಾಗಿದೆ. ಅಂತ್ಯದ ಸಮಯದಲ್ಲಿ ಎಲ್ಲ ಜನರನ್ನು ಆತನ ಮುಂದೆ ತರುವಾಗ, ಆತನು ಅವರ ಮುಂದೆ ಪ್ರಾಯೋಗಿಸುವವನಾಗಿದ್ದಾನೆ ಮತ್ತು ದೇವದೂತರ ಸಮ್ಮುಖದಲ್ಲಿ ಆತನು ಕೃಪೆಯ ಶ್ರೇಷ್ಟತೆಯು ಮತ್ತು ದೇವಜನರಿಗಾಗಿ ಕ್ರಿಸ್ತನಲ್ಲಿಯ ಆತನ ಕರುಣಯನ್ನು ಆತನು ಪ್ರಾಯೋಗಿಸುವವನಾಗಿದ್ದಾನೆ.

ಪೌಲನು ದೇವರ ಕೃಪೆಯ ಬಗ್ಗೆ ಮಾತ್ರವಲ್ಲ ''ತನ್ನ ಅಪಾರವಾದ ಕೃಪಾತಿಶಯದ'' ಬಗ್ಗೆಯೂ ಮಾತನಾಡುವವನಾಗಿದ್ದಾನೆ. (*huperballō,* ''ಅಪರವಾದ'') 2 ಕೊರಿಂಥ 9:14ರಲ್ಲಿ ಸಹ ದೇವರ ಕೃಪೆಯನ್ನು ವರ್ಣಿಸಲು ಬಳಸಲ್ಪಟ್ಟಿದೆ. ಆತನ ಶಕ್ತಿ ಮತ್ತು ಕ್ರಿಸ್ತನ ಪ್ರೀತಿಯನ್ನು ವರ್ಣಿಸಲು ಇದೇ ರೀತಿಯ ಪದವನ್ನು ಪೌಲನು ಎಫೆಸದಲ್ಲಿ ಎಲ್ಲೆಲ್ಲಿಯು ಬಳಸಿದ್ದಾನೆ (1:19; 3:19).

> ಈ ಕೊನೆಯ ಆಧಾರ ಮತ್ತು 1:19-21 ಮತ್ತು 2:4-7 ಮಧ್ಯದ ಸಮಾನತೆಯ ಬೆಳಕಿನಲ್ಲಿ ಇವುಗಳ ಸಂಬಂಧದಲ್ಲಿ ... ಮರಣದಿಂದ ಕ್ರಿಸ್ತನ ಎಬ್ಬಿಸುವಿಕೆಯು ಪರಲೋಕರಾಜ್ಯದಲ್ಲಿ ಕೂಡ್ರಿಸುವಿಕೆಯು ದೇವರ ಅಪಾರವಾದ ಶಕ್ತಿಯ ಅದ್ವಿತೀಯ ಪ್ರಾಯೋಗಿಸುವಿಕೆಯು ಆಗಿದೆ, ನಂತರ ವಿಶ್ವಾಸಿಗಳನ್ನು ಆತ್ಮೀಕ ಮರಣದಿಂದ ಎಬ್ಬಿಸಿ ಕ್ರಿಸ್ತನೊಂದಿಗೆ ಪರಲೋಕ ರಾಜ್ಯದಲ್ಲಿ ಕೂಡ್ರಿಸುವಿಕೆಯು ದೇವರ ಅಪಾರ ಕರುಣೆಯ ಅದ್ವಿತೀಯ ಪ್ರಾಯೋಗಿಸುವಿಕೆಯು ಆಗಿದೆ.[6]

2:4-7ರಲ್ಲಿ ಕಡೇಪಕ್ಷ ಮೂರು ಸಮಾರೋಪಗಳು ತೆಗೆದುಕೊಳ್ಳಬಹುದು. (1) ಕ್ರಿಸ್ತನು ಎಬ್ಬಿಸಲ್ಪಡುವನು ಮತ್ತು ದೇವರ ಬಲಗಡೆಯಲ್ಲಿ ಉನ್ನತೀಕರಿಸಲ್ಪಟ್ಟನು, ಮತ್ತು ಸುವಾರ್ತೆಗೆ ವಿಧೇಯನಾದ ಕ್ರೈಸ್ತನು, ಎಬ್ಬಿಸಲ್ಪಟ್ಟನು ಮತ್ತು ಕ್ರಿಸ್ತನ ಜೊತೆ ಆತ್ಮೀಕ ರಾಜ್ಯದಲ್ಲಿ ಕೂತುಕೊಳ್ಳುವನು. (2) ಕ್ರಿಸ್ತನ ಮಹಿಮೆಯಪಡಿಸುವಿಕೆಯು ವಾಸ್ತವವು ಮತ್ತು ಆತನೊಡನೆಯ ಕ್ರೈಸ್ತನ ಸಂಬಂಧವು ಭವಿಷ್ಯದ ಸೂಚನೆಯಾಗಿದೆ. (3) ದೇವರು ನೆರವೇರಿಸಿದ ಸಂಪೂರ್ಣ ಅವತರಿಸುವಿಕೆಯು ನವೋದಯ ಕಾಲವು ಬರುವವರೆಗೆ,

ಕ್ರಿಸ್ತನು ಕಾಣಿಸಿಕೊಳ್ಳುವವರೆಗೆ ನಾವು ಆತನೊಡನೆ ಮಹಿಮೆಯಲ್ಲಿ ಕಾಣಿಸಿಕೊಳ್ಳುವವರೆಗೆ ಅದು ವಿಶ್ವಾಸಿಗಳಿಗೆ ಪ್ರಕಟಗೊಳ್ಳದು (ನೋಡಿರಿ ಕೊಲೊಸ್ಸೆ 3:4).

ಪೌಲನು ಈಗಾಗಲೇ ಪಾಪಿಗಳತ್ತ ದೇವರ ಭದ್ರವಾದ ಮನೋದರ್ಮವನ್ನು "ಕನಿಕರ," "ಪ್ರೀತಿ" ಮತ್ತು "ಕೃಪೆ" ಎಂದು ವರ್ಣಿಸಿದ್ದಾನೆ (2:4-7). ವಚನ 7ರಲ್ಲಿನ ಈ ಸಂಗತಿಗಳು ಉದಾರತೆಗೆ ಸಂಬಂಧಿಸಿದಂತಹದನ್ನು ಸೂಚಿಸುವಂತದ್ದು ಮತ್ತು ಮನುಕುಲವು ಕೃತಘ್ನತೆಯಲ್ಲಿ ಇದ್ದಾಗ್ಯೂ ಕೂಡಾ ತನ್ನ ಜನರಿಗಾಗಿ ದೇವರ ಕಾರ್ಯನಿರತ ಒಳ್ಳೆಯತನವು "ಕರುಣೆ" (*chrēstotēs*), ಎಂಬುದಕ್ಕೆ ಜೋಡಿಸಲ್ಪಟ್ಟವು ಆಗಿವೆ.[7]

**ವಚನ 8.** *Gar* **ಎಂಬದಕ್ಕಾಗಿನ** ಭಾಷಾಂತರವು ಮತ್ತು ದೇವರ ಕೃಪೆಯ ಅಪರಿಮಿತ ಅಪಾರಕೆಗೆ ಸಂಬಂಧಸಿದಂತೆ ಈಗ ಬರೆದ ಪ್ರಕಾರ ಪೌಲನು ನಂತರದಲ್ಲಿ ಹೇಳಿದಂತವುಗಳನ್ನು ಜೋಡಿಸುವವು ಆಗಿವೆ. ಈಗ ತಾನೆ ಆತನು ಎಫೆಸದವರು ಕೃಪೆಯಿಂದಲೇ ರಕ್ಷಿಸಲ್ಪಟ್ಟರು ಎಂದು ಹೇಳಿದನು (2:5), ಮತ್ತು ಆತನ ನಂಬಿಕೆಯ ಮನುಷ್ಯನೊಡನೆ ದೇವರ ಕೃಪೆಯ ಸಂಬಂಧದ ಪ್ರಭಾವವನ್ನು ಇದು ಪರಿಚಯಿಸುವದಾಗಿದೆ.

ಕೃಪೆಯಿಂದ ರಕ್ಷಿಸಲ್ಪಟ್ಟವನು ಆ ಕೃಪೆಯನ್ನು ಪಡಕೊಳ್ಳಲಾರದವನಿಗೆ ಸಲಹೆ ನೀಡಲಾರನು ಎಂಬುದು ಅಪೊಸ್ತಲನ ದೃಢೀಕೃತ ವಚನವು ಆಗಿದೆ. ರಕ್ಷಣೆಯು ಹೊಂದಿದ ಎಲ್ಲ ಸಂಗತಿಗಳು ದೇವರ ಕೃಪೆಯಿಂದ ಹರಿಯುವ ಲಕ್ಷಣವನ್ನು ಹೊಂದಿವೆ, ಆದರೆ ಆ ವ್ಯಕ್ತಿಯು ಯಾವುದರಿಂದಲಾದರೂ ಒಂಟಿಯಾಗಿ ರಕ್ಷಿಸಲ್ಪಡುತ್ತಾನೆ ಎಂಬುದು ಹೊಸ ಒಡಂಬಡಿಕೆಯಲ್ಲಿ ಈಗ ಬೋಧಿಸುವುದಾಗಿದೆ. ಮನುಕುಲಕ್ಕೆ ರಕ್ಷಣೆಯನ್ನು ತರಲು ದೇವರು ಮಾಡಿದ ಎಲ್ಲವನ್ನೂ ಕೃಪೆಯು ಕೂಡಿಸುವುದಾಗಿದೆ. ದೇವರ ಈ ಕೃಪೆಯು "ಎಲ್ಲ ಮನುಷ್ಯರಿಗೆ ... ಪ್ರತ್ಯಕವಾಯಿತು" (ತೀತ 2:11). ಹಾಗಿದ್ದಾಗ, ಎಲ್ಲರೂ ಯಾಕೆ ರಕ್ಷಣೆಹೊಂದುವುದಿಲ್ಲ? ಸರಳವಾದ ಉತ್ತರವು ಎಲ್ಲರೂ ದೇವರ ಕೃಪೆಯನ್ನು ಸರಿಯಾದ ರೀತಿಯಲ್ಲಿ ಪಡೆದುಕೊಳ್ಳುವುದಿಲ್ಲ, ಅದು **ಕೃಪೆಯ ಮೂಲಕವೇ** ಆಗಿದೆ. ವ್ಯರ್ಥಮಾಡಿಕೊಳ್ಳಬೇಡಿರಿ" ಎಂದು ಪೌಲನು ಎಚ್ಚರಿಸಿದ್ದಾನೆ.

ಮಾನವನ ರಕ್ಷಣೆಯಲ್ಲಿ ದೇವರ ಪಾತ್ರವನ್ನು "ಕೃಪೆಯ" ಸಾರಾಂಶೀಕರಿಸಿದ್ದಾಗ, "ನಂಬಿಕೆಯು" ದೇವರಿಗೆ ಮಾನವನ ಪ್ರತಿಕ್ರಿಯೆಯನ್ನು ಸಾರಾಂಶೀಕರಿಸುವುದಾಗಿದೆ. "ನಂಬಿಕೆಯನ್ನು" ಹೊಂದುವ ಅಥವಾ ನಂಬುವ ವಿಚಾರವನ್ನು ಸಾಮಾನ್ಯವಾಗಿ ಅಥವಾ ಸಮಗ್ರ ರೀತಿಯಲ್ಲಿ ಒಳಗೊಂಡ ದೇವರೆಡೆಗಿನ ಒಬ್ಬನ ಸಮಗ್ರ ಪ್ರತಿಕ್ರಿಯೆಯನ್ನು ಹೊಸ ಒಡಂಬಡಿಕೆಯು ಹಲವು ಬಾರಿ ಚಿತ್ರಿಸಿದೆ (ನೋಡಿರಿ ಯೋಹಾನ 3:16; ರೋಮಾಪುರ 1:16; 5:1). "ಕೃಪೆ" ಮನುಷ್ಯನ ರಕ್ಷಣೆಯಲ್ಲಿ ದೇವರ ಪಾತ್ರವನ್ನು ಸಾರಾಂಶೀಕರಿಸಿದಾಗ "ನಂಬಿಕೆ"ಯು ದೇವರೆಡೆಗೆ ಮಾನವನ ಪ್ರತಿಕ್ರಿಯೆಯನ್ನು ಸಾರಾಂಶೀಕರಿಸುವುದಾಗಿದೆ. ಸಾಮಾನ್ಯವಾದುದರಲ್ಲಿ ಅಥವಾ ಸಮಗ್ರ ರೀತಿಯಲ್ಲಿ ದೇವರೆಡೆಗೆ ಒಬ್ಬನ ಸಮಸ್ತ ಪ್ರತಿಕ್ರಿಯೆಯನ್ನು ಹೊಸ ಒಡಂಬಡಿಕೆಯು "ನಂಬಿಕೆ" ಹೊಂದಿರುವ ವಿಚಾರವನ್ನು ಅಥವಾ ನಂಬುವ, ಸಾಮಾನ್ಯವಾದುದರಲ್ಲಿ ಅಥವಾ ಸಮಗ್ರ ರೀತಿಯಲ್ಲಿ ಹಲವು ಬಾರಿ ಚಿತ್ರಿಸುವುದಾಗಿದೆ (ನೋಡಿರಿ ಯೋಹಾನ 3:16; ರೋಮಾಪುರ 1:16; 5:1). ಇದಕ್ಕೆ ಜೊತೆಯಾಗಿ, "ನಂಬಿಕೆ" ಮತ್ತು "ನಂಬುಗೆಗಳು" ಸಹ ಒಬ್ಬನ ಅನೇಕ ಪ್ರತಿಕ್ರಿಯೆಗಳನ್ನು ಹೊಸ ಒಡಂಬಡಿಕೆಯಲ್ಲಿ ನಿರ್ದಿಷ್ಟವಾಗಿ ಬಳಸಲ್ಪಟ್ಟಿವೆ (ನೋಡಿರಿ ಮಾರ್ಕ 16:16; ಅಪೊಸ್ತಲರ ಕೃತ್ಯಗಳು 18:8). ಅಪೊಸ್ತಲರ ಕೃತ್ಯಗಳು 16:25-34ರಲ್ಲಿ, ಲೂಕನು ಫಿಲಿಪ್ಪಿಯಲ್ಲಿನ ಸೆರೆಮನೆಯ ಅಧಿಕಾರಿಯ ಪರಿವರ್ತನೆಯನ್ನು ದಾಖಲಿಸಿದ್ದಾನೆ. ಸೆರೆಯ ಯಜಮಾನನು ಪೌಲನಿಗೆ "ನಾನು ರಕ್ಷಣೆಯನ್ನು ಹೊಂದಲು ಏನು ಮಾಡಬೇಕು?" ಎಂದು ಕೇಳಿದಾಗ ಆತನು "ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು" ಎಂದು ಹೇಳಿದನು

(ವಚನಗಳು 32. 33). ಪೌಲನು ಆತನಿಗೆ ದೇವರ ವಾಕ್ಯವನ್ನು ತಿಳಿಸಿದನು" ಆಗ ಆತನು ಮತ್ತವನ ಮನೆಯವರೆಲ್ಲರೂ ದೀಕ್ಷಾಸ್ನಾನ ಮಾಡಿಸಿಕೊಂಡರು (ವಚನಗಳು 32, 33). ದೀಕ್ಷಾಸ್ನಾನ ಹೊಂದಿದ ನಂತರ ಸೆರೆಯ ಯಜಮಾನನು "ತನ್ನ ಮನೆಯವರೆಲ್ಲರ ಸಂಗಡ ನಂಬಿ ಉಲ್ಲಾಸಗೊಂಡನು" (ವಚನ 34). "ನಂಬಿಕೆಯು ವಿಧೇಯತೆಯತ್ತ ನಡೆಸುತ್ತದೆ" ಎಂದು ಈ ವಿವರಣೆಯು ದೃಷ್ಟಾಂತೀಕರಿಸುವುದಾಗಿದೆ.

ಒಂದು ಜನಪ್ರೀಯ ಹೇಳಿಕೆಯು ಎಂದರೆ ಕ್ರಿಸ್ತನಿಗೆ ನಂಬಿಕೆಯ ಪ್ರತಿಕ್ರಿಯೆಯು "ನಂಬಿಕೆ ಮಾತ್ರದ" ಪ್ರತಿಕ್ರಿಯೆ ಆಗಿದೆ, ಆದರೆ ಹೊಸ ಒಡಂಬಡಿಕೆಯು ಎಂದಿಗೂ ಹಾಗೆ ಹೇಳದು. ವಾಸ್ತವವಾಗಿ, ಒಂದೇ ಸಾರಿ "ನಂಬಿಕೆ ಮಾತ್ರ" ಎಂದು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವುದಾಗಿದೆ ಇದು "ಅದರಿಂದಲ್ಲದೆ" ಎಂಬ ಸಂದರ್ಭದಿಂದ ಆಗಿದೆ (ಯಾಕೋಬ 2:24).

"ನಂಬಿಕೆ," "ನಂಬುಗೆ," ಮತ್ತು "ನಂಬುವದು" ಎಂಬವುಗಳು ಗ್ರೀಕ್ ಭಾಷಾಂತರದ ಒಂದೇ ಮೂಲದಿಂದ ಬಂದವುಗಳು ಆಗಿವೆ. ಕ್ರಿಯಾಪದವು *pisteuō* ದಿಂದ ಬಂದಿದ್ದು ಮತ್ತು *"ಸಂಪೂರ್ಣವಾಗಿ ಸಮಜಾಯಿಸಿದ ಅಂಗೀಕರಿಸುವಿಕೆ"* ಅಥವಾ *"ಸಂಪೂರ್ಣವಾದ ಭರವಸೆ ಮತ್ತು ಧೃಢವಾದ ವಿಶ್ವಾಸ"* ಎಂದು ವ್ಯಾಖ್ಯಾನಿಕರಿಸಬಹುದಾಗಿದೆ.[8] ನಂಬಿಕೆಯ ವಿಷಯವು "ಮನವರಿಕೆ ... ವಿಶ್ವಾಸ ... ವಿಧೇಯತೆ" ಇವನ್ನು ಒಳಗೊಂಡಿದೆ.[9] ಸತ್ಯವೇದಿಯ ನಂಬಿಕೆಯು ಇದರ ಸಮಗ್ರವಾದ ಸ್ವಭಾವವನ್ನು ಹೊಂದಿಕೊಂಡಿದೆ. ಹಳೆಯ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿ ದೇವರಿಂದ, ಸ್ವೀಕೃತವಾದ ನಂಬಿಕೆಯು ಮನವರಿಕೆ, ವಿಶ್ವಾಸ, ವಿಧೇಯತೆ ಎಂಬ ಅಂಶಗಳಿಂದ ಲಕ್ಷಕರಿಸಲ್ಪಟ್ಟಿದೆ.

ವಿಧೇಯತ್ವದ ನಂಬಿಕೆಯ ಅಗತ್ಯೆತೆ ಇದ್ದಾಗ್ಯೂ, ನಮ್ಮನ್ನು ನಾವು ರಕ್ಷಿಸಿಕೊಳ್ಳಲಾರೆವು ಪೌಲನು ಮುಂದೆ, **ನಿಮ್ಮಿಂದುಟಾದದ್ದಲ್ಲ, ಅದು ದೇವರ ವರವೇ** ಎಂದು ಹೇಳುತ್ತಾನೆ. ಅದು *touto,* ಭಾಷಾಂತರವಾಗಿದ್ದು, ರಕ್ಷಣೆಯ ಸಂಪೂರ್ಣ ಕಾರ್ಯದೆಡೆಗೆ ಅದು ನಿಲ್ಲುವುದಾಗಿದೆ. ದೇವರ ಕೃಪೆಯು, ನಂತರ ಮಾನವ ಕುಶಲತೆಯು ಅಲ್ಲ, ಆದರೆ ಮಾನವನಿಗೆ "ವರವಾಗಿ" ಬರುವುದಾಗಿದೆ. ರಕ್ಷಣೇಯ "ದೇವರ" ವರವಾಗಿರುವಾಗ, ರಕ್ಷಣೆಯ ಹೊಂದುವ ಪ್ರಕ್ರಿಯೆಯಲ್ಲಿ ಮಾನವನ ಯಾವನ ಕೊಡುಗೆಯೂ ಇಲ್ಲ ಎಂದು ಪ್ರತಿಪಾದಿಸುವವರು ಆ ವರವನ್ನು ಸ್ವೀಕರಿಸುವವರೆಗೂ ಅದನ್ನು ಯಾರೊಬ್ಬನೂ ಪ್ರಯೋಜನವನ್ನು ಪಡೆಯಲಾರನು ಎಂಬುದನ್ನು ಗಮನಿಸುಬೇಕಾಗಿದೆ. ರಕ್ಷಣೆಯ ದೇವರ ವರವು ಕೃಪೆಯಿಂದ ಕೊಡಲ್ಪಟ್ಟಿದೆ, ಅದರೆ ನಂಬಿಕೆಯಿಂದ ಸ್ವೀಕರಿಸಲ್ಪಟ್ಟಿದೆ. ಮಾನವ ಪಿತನು ತನ್ನ ಮಗುವಿಗೆ ತನ್ನ ಪಿತ್ರಾರ್ಜಿತ ಬಾಧ್ಯತೆಯಿಂದ ಕೊಡುಗೆಯನ್ನು ಕೊಟ್ಟಿದ್ದಾದರೆ, ಮಗುವು ಅದನ್ನು ಸ್ವೀಕರಿಸಿ ಅದರಿಂದ ಪ್ರಯೋಜನವನ್ನು ಪಡೆಯಲೇಬೇಕು.

**ವಚನ 9.** ಈ ಹೇಳಿಕೆಯು ರಕ್ಷಣೆಯು ಕೃಪೆಯ ವರವು ಹೊರತು ಮನುಷ್ಯ ಪ್ರಯತ್ನದ ... **ಪ್ರಲಿಣಾಮವಲ್ಲ** ಎಂದು ಮುಂದೆ ಒತ್ತಿ ಹೇಳುವುದಾಗಿದೆ. ನಂಬುವದು, ವಿಶ್ವಾಸವಿಡುವದು, ವಿಧೇಯತ್ವದ ನಂಬಿಕೆಗಳು ಮಾನವ ಪ್ರಯತ್ನವಾಗಿದ್ದುದರಿಂದ, ಇದು ರಕ್ಷಣೆಗೆ ಅವಶ್ಯವಿಲ್ಲ ಎಂದು ಕೆಲವರು ಹೇಳುವದುಂಟು. ತದ್ವಿರುದ್ಧತೆಯಲ್ಲಿ, ನಂಬಿಕೆಯು ಕಾರ್ಯನಿರ್ವಹಿಸದು. ಪೌಲನು "ಕಾರ್ಯಗಳ ... ದೆಸೆಯಿಂದಲ್ಲ" ಎಂದು ಪೌಲನು ಹೇಳುವಾಗ, ಆತನು ಕಾರ್ಯದ ಗುಣದ ಬಗ್ಗೆ ಮಾತನಾಡುತ್ತಿದ್ದನು, ಮತ್ತು ಯಾರೊಬ್ಬನೂ ರಕ್ಷಣೆಯನ್ನು ಗುಣಮಾಡಿದನು. ಯಾವನಾದರೂ ರಕ್ಷಣೆಯನ್ನು ಸಂಪಾದಿಸಬೇಕಾದರೆ, ದೇವರೆದುರು ಆತನು ತನ್ನ ಪಾಂಡಿತ್ಯದ ಬಡಾಯಿಯನ್ನು ಕೊಚ್ಚಿಕೊಳ್ಳುತ್ತಿದ್ದಾನೆ ಮತ್ತು ರಕ್ಷಣೆಯನ್ನು ತಾನೆ ಆತನಿಗೆ ಸಾಲಕೊಟ್ಟವನ ಹಾಗೆ ಪ್ರತಿಪಾದಿಸುವವನಾಗಿದ್ದಾನೆ ಹೇಗೋ, ಅಲ್ಲಿ ಯಾವುದೇ ಕೊಚ್ಚಿಕೊಳ್ಳುವಿಕೆಯು ಇಲ್ಲ ಎಂದು ಪೌಲನು ಹೇಳಿದ್ದಾನೆ. ಕಾರ್ಯದ ಗುಣವು ಎಂದಿಗೂ ರಕ್ಷಣೆಯನ್ನು ಸಂಪಾದಿಸಲಾರದು, ಆದರೆ ವಿಶ್ವಾಸದ ಅನುಭವಗಳ ಕಾರ್ಯಗಳು

ಯಾವಾಗಲೂ ಅವಶ್ಯಕವಾದವು ಆಗಿವೆ. "ಕ್ರಿಯೆಗಳಿಲ್ಲದ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು" ಎಂದು ಹೇಳುವಾಗ ಯಾಕೋಬನು ಅದನ್ನೇ ಮನದಲ್ಲಿ ಇಟ್ಟುಕೊಂಡಿರಬಹುದು (ಯಾಕೋಬ 2:17). "ಕ್ರಿಯೆಗಳಿಲ್ಲದ ನಂಬಿಕೆಯನ್ನು ನನಗೆ ತೋರಿಸು ನೋಡೋಣ" ಎಂದು ಆತನು ಹೇಳುವಾಗ ಎದುರಿಸಲಾರದ ಸವಾಲನ್ನು ಆತನು ಮಂಡಿಸಲು ಸಾಗುತ್ತಿದ್ದಾನೆ (2:18). ಒಬ್ಬನು ನಂಬಿಕೆಯಲ್ಲಿ ಮಾತನಾಡುಬಹುದು, ಆದರೆ ಆತನು ನಂಬಿಕೆಯನ್ನು ತೋರಿಸಿದಾಗ. ಅದು ಕೆಲಸದ ಮೂಲಕ ಗಮನಾರ್ಹವಾದ ಕ್ರಿಯೆಯು ಆಗಿರುತ್ತದೆ. ಸುವಾರ್ತೆಗೆ ವಿಧೇಯತೆರಾಗುವ ಮೂಲಕ ದೇವರ ಕೃಪೆಯಿಂದ ಕೊಡಲ್ಪಟ್ಟ ರಕ್ಷಣೆಯನ್ನು ಒಬ್ಬನು ಅಂಗೀಕರಿಸ್ಕೊಂಡಾಗ, ಆತನು ಏನನ್ನು ಸಂಪಾದಿಸನು ಮತ್ತು ಹೊಗಳಿಕೊಳ್ಳುವುದಕ್ಕೆ ಯಾವುದೇ ಕಾರಣವು ಇರುವುದಿಲ್ಲ. ಕ್ರಿಸ್ತನು ಕೂಜ್ರೆಯಲ್ಲಿ ಪ್ರಾಯೋಜಿಸಿದ ಆತನ ಕೃಪೆಯನ್ನು ಆನಂದಿಸುವುದೊಂದೆ ಆತನ ಕಾರಣವಾಗಿ ಇರುವುದಾಗಿದೆ.

ಇಬ್ರಿಯ 11ರಲ್ಲಿನ ದೇವರ "ನಂಬಿಕೆಯಲ್ಲಿ ಪ್ರಾಮಾಣಿಕ ಪಾತ್ರ"ದಲ್ಲಿ ಈ ಅಂಶವು ಚೆನ್ನಾಗಿ ಬಂದಿವೆ. ಹಳೆಒಡಂಬಡಿಕೆಯ ಪಾತ್ರಗಳು ತಮ್ಮ ನಂಬಿಕೆಯನ್ನು ಪ್ರಾಯೋಜಿಸಿದ್ದಾರೆ ಹೇಬೇಲನು ಯಜ್ಞ ಸಮರ್ಪಿಸಿದನು, ಹನೋಕನು ಸಂತುಷ್ಟಗೊಳಿಸಿದನು, ನೋಹನು ನಾವೆ ಕಟ್ಟೀದನು, ಅಬ್ರಹಾಮನನು ವಿಧೇಯನಾದನು ಮತ್ತು ಯಜ್ಞವರ್ಪಿಸಿದನು ಮತ್ತು ಮೋಶೆಯು ಆಯ್ಕೆಯನ್ನು ಮಾಡಿದನು. ಇದೆ ದೇವರು ಕೃಪಾಪೂರಿತವಾಗಿ ಕೊಟ್ಟದ್ದನ್ನು ಸ್ವೀಕರಿಸಿದ ನಂಬಿಕೆ - ಮನವರಿಕೆ, ವಿಶ್ವಾಸ ಮತ್ತು ವಿಧೇಯತೆಯನ್ನು ಒಳಗೊಂಡ ನಂಬಿಕೆಯು ಇದಾಗಿದೆ.

**ವಚನ 10.** ವಚನ 8ರಲ್ಲಿರುವಂತೆ, ಪೌಲನಿ**ಗೋಸ್ಕರ** ಎಂಬುದನ್ನು ಬಳಸಿದ್ದು ಈಗಾ ತಾನೇ ಆತನು ಹೇಳಿದ್ದಕ್ಕೆ ಆತನ ವಿಚಾರಧಾರೆಯನ್ನು ಜೋಡಿಸುವಂತದ್ದಾಗಿದೆ. ಮಾನವನು ತನ್ನ ಕಾರ್ಯದ ಗುಣಗಳಿಂದ ರಕ್ಷಣೆಯನ್ನು ಸಂಪಾದಿಸದೆ ಇರುವಾಗ, ಕ್ರೈಸ್ತರು ದೇವರ **ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು** ಎಂದು ನೆನಪಿಸುವವನಾಗಿದ್ದಾನೆ. ಈ ಹೇಳಿಕೆಯು ರಕ್ಷಣೆಯು ದೇವರಿಂದ ಬಂದವರ ಮತ್ತು ಮಾನವನ ಕಾರ್ಯದಿಂದ ಸಂಪಾದಿಸಲ್ಪಟ್ಟು ಹೊಗಳಿಕೊಳ್ಳುವತ್ತೆ ನಡೆಸುವುದಲ್ಲ ಎಂಬ ಹೇಳಿಕೆಯ ಮುಂದಿನ ಸೂಚನೆಯು ಆಗಿದೆ. ರಕ್ಷಿಸಲ್ಪಟ್ಟವರು "ಕ್ರಿಸ್ತನಲ್ಲಿ ಒಳ್ಳೆಯ ಕಾರ್ಯಗಳಿಗೋಸ್ಕರ ಸೃಷ್ಟಿಸಲ್ಪಟ್ಟಿದ್ದರಿಂದ." ಅಂಥ ಕಾರ್ಯಗಳು ರಕ್ಷಣೆಯ ಕಾರಣವಾಗಿರುವುದಿಲ್ಲ. ಬದಲಾಗಿ, ದೀಕ್ಷಾಸ್ನಾನದ ವಿಷಯದಲ್ಲಿ ಕ್ರಿಸ್ತನಲ್ಲಿ ಅವರು ಪ್ರವೇಶಿಸಿದಾಗ ಅವರ ರಕ್ಷಣೆಯು ಕೊಡಲ್ಪಡುವುದಾಗಿದೆ.

ದೇವರು ಆದಿಯಲ್ಲಿ ಸೃಷ್ಟಿಯನ್ನು ಸೃಷ್ಟಿಸಿದನು, ಮತ್ತು ಜಗತ್ತು ಆತನ ಕೆಲಸವಾಗಿದೆ. ಈಗ ದೇವರು ನಮ್ಮನ್ನು "ಕ್ರಿಸ್ತನಲ್ಲಿ" ಸೃಷ್ಟಿಸಿದನು ಮತ್ತು ನಾವು ಆತನ ಕಾರ್ಯವಾಗಿದ್ದೇವೆ. ಕ್ರಿಸ್ತನಲ್ಲಿಯ ಈ ಸೃಷ್ಟಿಯು ಪ್ರಶಸ್ತಿ ಆಗಿದೆ: ದೇವರು ಪಾಪಿಗಳನ್ನು ಅವರ ಪಾಪದಿಂದ ರಕ್ಷಿಸಿ ಹೊಸಬರನ್ನಾಗಿ ಮಾಡಿದ್ದಾನೆ. 2 ಕೊರಿಂಥ 5:17ರಲ್ಲಿ ಪೌಲನು "ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು" ಅಥವಾ "ಒಬ್ಬ ಹೊಸ ಸೃಷ್ಟಿ" ಆದನು ಎಂದು ಹೇಳುತ್ತಾನೆ. ನಂತರ ಅಧ್ಯಾಯ 2ರಲ್ಲಿ ಕ್ರಿಸ್ತನಲ್ಲಿ ಯೆಹೂದಿಗಳು ಮತ್ತು ಅನ್ಯಜನರಿಗಾಗಿ ದೇವರ ಅದೇ ಕಾರ್ಯವನ್ನು ಮಾಡುವಾ "ಆತನು ಸಮಾಧಾನಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ" ಎಂದು ಪೌಲನು ಹೇಳುತ್ತಾನೆ. ಅದೆ ಗ್ರೀಕ ಪದವು (*ktizō*) 4:24ರಲ್ಲಿ ಪಾಪಗಳ ರಕ್ಷಣೆಯನ್ನು ಚಿತ್ರಿಸುವಾಗ ಬಳಸಲ್ಪಟ್ಟಿದೆ ... ಮಾನವನಿಗೆ ದೇವರ ವಿಸ್ತೃತವಾದ ವರವೇ ರಕ್ಷಣೆಯು ಆಗಿದೆ. ಈ ವೇದಭಾಗದಲ್ಲಿನ ರಕ್ಷಣೆಯ ಅರ್ಥವು ಕ್ರಿಸ್ತನಲ್ಲಿಯ ದೇವರ ಕ್ರಿಯಾತ್ಮಕ ಕಾರ್ಯ ಮತ್ತು ನಮ್ಮ ರಕ್ಷಣೆಯ ಉದ್ದೇಶವು ನಾವು ಒಳ್ಳೆಯ ಕಾರ್ಯಗಳನ್ನು ಮಾಡಬೇಕಾಗಿರುವುದೇ ಆಗಿದೆ.

ಕ್ರಿಸ್ತನು ವಿಶ್ವದ ಸೃಷ್ಟಿಯಲ್ಲಿ ದೇವರ ನಿಯೋಗಿಯಾಗಿರುವಂತ (ಯೋಹಾನ

1:1-3; ಇಬ್ರಿಯ 1:2; ಕೊಲೊಸ್ಸೆ 1:16), ಹಾಗೆಯೇ. ಆತನೂ ಸಹ ಕ್ರಿಸ್ತನಲ್ಲಿರುವ ದೇವರ ಹೊಸ ಮನುಷ್ಯನ ಸೃಷ್ಟಿಯ ನಿಯೋಗಿ ಆಗಿದ್ದಾನೆ. ಈ ಹೊಸ ಮನುಷ್ಯನು "ಒಳ್ಳೆಯ ಕಾರ್ಯಗಳಿಗಾಗಿ" ಸೃಷ್ಟಿಸಲ್ಪಟ್ಟಿದ್ದಾನೆ. ಕ್ರಿಸ್ತನಲ್ಲಿರುವವರ ಜೀವಿತವು ಒಳ್ಳೆಯ ಕಾರ್ಯಗಳಿಂದಾಗಿ ಲಕ್ಷೀಸಲ್ಪಟ್ಟಿವೆ. ಒಳ್ಳೆಯ ಕಾರ್ಯಗಳು, ವಾಸ್ತವವಾಗಿ, ಉದ್ದೇಶ, ಪರಿಣಾಮ, ಅಥವಾ ಹೊಸಸೃಷ್ಟಿಯ ಗುರಿ ಆಗಿವೆ. ಆದ್ದರಿಂದ, ಪ್ರಶಂಸಾರ್ಹವಾದ ಒಳ್ಳೆಯ ಕಾರ್ಯಗಳು ಪಾಪಿಗಳನ್ನು ರಕ್ಷಿಸದೇ ಇದ್ದಾಗ, ನಂಬಿಕೆಯ ಮೂಲಕ ಕೃಪೆಯಿಂದ ನಡೆದುಕೊಳ್ಳುವವರು ಪ್ರೀತಿಯಲ್ಲಿ ಒಳ್ಳೆಯ ವ್ಯವಹಾರಗಳನ್ನು ನಡೆಸುವ ನಂಬಿಕೆಯ ನೈಜತ್ವವನ್ನು ಪ್ರಾಯೋಗಿಸುವವರಾಗಿದ್ದಾರೆ (ಗಲಾತ್ಯ 5:6). ದೇವರಿಗೆ ಆರಂಭಿಕವಾಗಿ ನಂಬಿಕೆಯು ಪ್ರತಿಕ್ರಯಿಸುವಂತೆಯೇ ವಿಧೇಯತೆಯ ಕ್ರಿಯೆಗಳಿಂದ ಪ್ರಯೋಜಿಸುವಂತೆ (ನೋಡಿರಿ ಯೋಹಾನ 2:17), ಹಾಗೆಯೇ ಕ್ರಿಸ್ತನಲ್ಲಿರುವವರು ಒಳ್ಳೆಯ ಕಾರ್ಯಗಳಿಂದ ನೈಜತ್ವವನ್ನು ತೋರಿಸುವಂತೆ ನಂಬಿಕೆಯು ಕಾರ್ಯಮಾಡುವುದಾಗಿದೆ. ಇದೆ ವಿಚಾರವು ತೀತ 3:5, 8ರಲ್ಲಿ ಇರುವುದಾಗಿದೆ. ಅಲ್ಲಿ, ಪೌಲನು ದೇವರು ತನ್ನ ಕರುಣೆಯಿಂದಲೇ ವಿಶ್ವಾಸಿಗಳನ್ನು ರಕ್ಷಿಸಿದ್ದಾನೆ ಹೊರತು, ಮಾನವನ ಕಾರ್ಯಗಳಿಂದಲ್ಲ, ಆದರೆ ರಕ್ಷಿಸಲ್ಪಟ್ಟ ಜನರು ಒಳ್ಳೆಯ ಕಾರ್ಯಗಳಲ್ಲಿ ಮುಂದುವರೆಯುವುದರಲ್ಲಿ ನಿರಂತರವಾಗಿರಬೇಕು ಎಂದು ಪೌಲನು ಘೋಷಿಸಿದ್ದಾನೆ.

**ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.** "ಒಳ್ಳೆಯ ಕಾರ್ಯಗಳ" ಬಗ್ಗೆ ಪೌಲನು ಮಾತನಾಡುತ್ತಿದ್ದಾನೆ. ಜಗದುತ್ಪತ್ತಿಗಿಂತ ಮ್ನುನ್ನವೇ ದೇವರು ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ನೋಡಬಹುದಿತ್ತು (1:4). ಅದೇ ರೀತಿಯಲ್ಲಿ, ಮೊದಲೇ ತನ್ನ ಜನರು ಕ್ರಿಸ್ತನಲ್ಲಿ ಹೊಸ ಜೀವಿತವನ್ನು ಜೀವಿಸುವ ಹಾಗೆ ರುಜುವಾದ ಮತ್ತು ನೈತಿಕ ನಡಾವಳಿಕೆ ಆತನು ಗಮನಿಸುತ್ತಿದ್ದಾನೆ.

ದೇವರು "ಒಳ್ಳೆಯ ಕಾರ್ಯಗಳನ್ನು" ಜನರನ್ನು ರಕ್ಷಿಸುವ ತನ್ನ ಉದ್ದೇಶದ ಭಾಗವಾಗಿ ನೋಡಿದನು; ರಕ್ಷಿಸಲ್ಪಟ್ಟ ನಮ್ಮ ಉದ್ದೇಶದ ಭಾಗವು "ಅದರಲ್ಲಿ ನಡೆಯುವುದೆ" ಆಗಿದೆ. ಒಳ್ಳೆಯ ಕಾರ್ಯಗಳನ್ನು ಮಾಡುವದಕೋಸ್ಕರದ ಸಂಭಾವ್ಯತೆಯು ದೇವರಿಂದ ನಿತ್ಯತ್ವದ ಯೋಜನೆಯನ್ನು ಇಡುವುದಾಗಿದೆ, ಮತ್ತು ಆತನ ಯೋಜನೆಯ ಸಂಪೂರ್ಣತೆಯು ರಕ್ಷಿಸಲ್ಪಟ್ಟವರ ಜೀವನ ಶೈಲಿಯಲ್ಲಿ ಬದಲಾದದ್ದು ಕಂಡುಬರುವುದಾಗಿದೆ. ಒಳ್ಳೆಯದನ್ನು ಮಾಡುವ ವ್ಯವಹಾರದ ತೀರಿಸುವುಕೆಯು ನಾವು ನಮ್ಮ ಜೀವಿತದಲ್ಲಿ ದೇವರ ಉದ್ದೇಶವನ್ನು ಸಂಪೂರ್ಣಗೊಳಿಸಬೇಕೆಂಬುದು ನಿರ್ಧಾರದ ಭಾಗವಾಗಿರಬೇಕು.

## ಅನ್ವಯ

### ಶಿಲುಬೆಯ ಮೇಲೆ – ಕೃಪಾಳು ದೇವರು (2:4-12)

"ಆದರೆ ... ದೇವರು" ಎಂಬ ಪದವು ಜಗತ್ತಿನಲ್ಲಿ ಎಲ್ಲ ವ್ಯತ್ಯಾಸವನ್ನು ಮಾಡುವುದಾಗಿದೆ. ವಚನ 4ರಲ್ಲಿ ನಾವು "ಮತ್ತು ದೇವರು ಅವರೆಲ್ಲರನ್ನೂ ದೊಷೀಸಿದನು" ಅಥವಾ "ಅವರಲ್ಲಿ ಕಟ್ಟಕಡೆಯವನವರೆಗೂ ಪತಿಯೊಬ್ಬನನ್ನೂ ದೇವರು ನಾಶಮಾಡಿದನು" ಎಂದು ನಾವು ಬಯಸಬಹುದು. ಅದರ ಬದಲಾಗಿ ದೇವರು ಕರುಣೆಯ ಸ್ವಭಾವದ ಬಗೆಗೆ ಪೌಲನು ಮಾತನಾಡುತ್ತಾನೆ.

*"ಮಹಾಕರುಣಾಪೂರಿತನು."* ದೇವರು ಕೇವಲ ಕರುಣೆಯುಳ್ಳವನು ಅಲ್ಲ; ಆತನು ಮಹಾಕರುಣೆಯುಳ್ಳವನು. ಆತನು ಕರುಣೆಯಲ್ಲಿ ಆತನು ಸಂಪತ್ತಭರಿತನಾಗಿದ್ದಾನೆ. ಆತನು ಯಾವುದಕ್ಕೆ ಯೋಗ್ಯವಾದ್ದಾನೋ ಅದನ್ನು ಕರುಣೆ ತಪ್ಪಿಸಲು ಬಯಸುವುದಾಗಿದೆ, ಪಾಪಿಗಳು ನಾಶನಕ್ಕೆ ಯೋಗ್ಯವಾದ್ದಾರೆ, ಆದರೆ ದೇವರ ಕರುಣೆಯು ಅದನ್ನು ತಪ್ಪಿಸಲು

ಬಯಸುವುದಾಗಿದೆ.

*"ಆತನ ಮಹಾ ಪ್ರೀತಿ."* ಇದೇ ಕಾರಣಕ್ಕಾಗಿಯೇ ದೇವರು ತನ್ನ ಪ್ರೀತಿಯನ್ನು ವಿಸ್ತರಿಸಿದ್ದಾನೆ. ತನ್ನ ಮಹಾ ಪ್ರೀತಿಯಿಂದ ಎಲ್ಲ ಪಾಪಿಗಳನ್ನು ಪ್ರೀತಿಸುವವನಾಗಿದ್ದಾನೆ.

*"ಕೃಪೆಯಿಂದಲೇ ನೀನು ರಕ್ಷಿಸಲ್ಪಟ್ಟಿದ್ದಿ."* ದೇವರ ಕೃಪೆಯು "ಮೇರೆಯಿಲ್ಲದ, ಗುಣವನ್ನು ಮೀರಿದ, ಸಂಪಾದಿಸಲಾರಂಥ ಉಪಕಾರವಾಗಿದೆ." ಪಾಪಿಗಳಿಗೆ ಕೃಪೆಯನ್ನು ಕೊಡುವುದನ್ನು ಬಯಸುವುದಾಗಿ ಯಾಕೆಂದರೆ ಅವರು ಅದಕ್ಕೆ ಎಂದಿಗೂ ಯೋಗ್ಯವಿಲ್ಲದೆ ಇರುವುದೆ ಆಗಿದೆ. ಈ ಸಂತ್ಯಾಶಗಳನ್ನು ಗಮನಿಸಿರಿ: ಒಬ್ಬನು ಯಾವುದಕ್ಕೆ ಯೋಗ್ಯವಾಗಿರುತ್ತಾನೋ ಅದನ್ನು ನ್ಯಾಯವು ಕೊಡುವುದಾಗಿದೆ, ಮತ್ತು ದೇವರು ಪಾಪಿಗಳು ಕಳೆದುಹೋವುದಕ್ಕೆ ಅವಕಾಶವನ್ನು ನೀಡದವನು ಆಗಿದ್ದಾನೆ; ಮತ್ತು ಕರುಣೆಯು ಒಬ್ಬನು ಯಾವುದಕ್ಕೆ ಅರ್ಹನಾಗಿರುತ್ತಾನೋ ಅದರ ಜೊತೆ ಕೊಡುವುದಾಗಿದೆ. ಪ್ರತಿಯೊಬ್ಬ ತಾನು ಇನ್ನೂ ಪಾಪದಲ್ಲಿಯೇ ಉಳಿಯಬೇಕು ಮತ್ತು ದೇವರ ಶುದ್ಧವಾದ ತೀರ್ಪನ್ನು - ಮರಣವನ್ನು ಪಡೆಯಬೇಕು ಅಥವಾ ಒಪ್ಪಿಕೊಳ್ಳಬೇಕು ಮತ್ತು ಕ್ರಿಸ್ತನಲ್ಲಿಯ ದೇವರ ಪ್ರೀತಿ, ಕರುಣೆ, ಮತ್ತು ಕೃಪೆ ರಕ್ಷಿಸಲ್ಪಡಬೇಕು ಎಂಬುವದರಲ್ಲಿ ಆದುಕೊಳ್ಳಬೇಕಾಗಿದೆ. ಒಬ್ಬ ಪಾಪಿಯ ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಿಸಲ್ಪಡದೆ ಹೋದರೆ ಆತನು ಕ್ರಿಸ್ತನಿಂದ ಬೇರೆಯಾಗಿರುತ್ತಾನೆ ಮತ್ತು ದೇವರಿಲ್ಲದವನು ಆಗಿರುತ್ತಾನೆ (2:12). Jay Lockhart

**ಆತನ ಕೃಪೆಯ ಬಹುಮಾನಗಳು (2:1-10)**

ಸ್ಪರ್ಧೆಯ ವೀರಾಗ್ರಣಿಗಳು ಯಾವಾಗಲೂ ಬಹುಮಾನದಿಂದ, ರಿಬ್ಬನ್‌ಗಳಿಂದ, ಅಥವಾ ಮೆಡಲ್‌ಗಳಿಂದ ಸನ್ಮಾನಿಸಲ್ಪಡುತ್ತಾರೆ. ಈ ಬಹುಮಾನಗಳು ಸಾಧನೆಯನ್ನು ಗುರುತಿಸುವವು ಮತ್ತು ಅವನ್ನು ಹೊಂದಿದ ವ್ಯಕ್ತಿಗಳಿಗೆ ಗೌರವ ತರುವಂಥವು ಆಗಿರುತ್ತವೆ. ಈ ಸಂಪ್ರದಾಯಿಕವಾದ ದಿನಾಂಕಗಳು ಪೌಲನ ಓದುಗರಿಗೆ ಚಿರಪರಿಚಿತವಾದ ಪ್ರಾಚೀನ ಓಲಂಪಿಕ್ ಆಟಗಳತ್ತ ಸ್ವಲ್ಪವಾದರೂ ತಿರುಗಿಸುವವು ಆಗಿವೆ (ನೋಡಿರಿ 1 ಕೊರಿಂಥ 9:24; 2 ತಿಮೊಥೆ 2:5). ಆಶ್ಚರ್ಯವಾಗಿ ಕಾಣುವಂಥದ್ದು ಅಂದರೆ, ದೇವರು ಸಹ ತನ್ನದೇ ಆದ ಬಹುಮಾನವನ್ನು ಹೊಂದಿದ್ದಾನೆ. ಅದರ ಬಗ್ಗೆ ನಾವು ಎಫೆಸ 2:1-10ರಲ್ಲಿ ಕಲಿಯುವವರಾಗಿದ್ದೇವೆ.

ನಮ್ಮ ಹಿಂದೆ ಗತಿಸಿಹೋದದ್ದು. ನಮ್ಮನ್ನು ಆಯ್ದುಕೊಳ್ಳುವಲ್ಲಿ, ಬಿಡುಗಡೆಯಲ್ಲಿ, ಮತ್ತು ಬಾಧ್ಯತೆಯನ್ನು ಕೊಡುವಲ್ಲಿ ದೇವರು ಮಾಡಿದ್ದರ ಬಗ್ಗೆ ಪೌಲನು ಹೇಳುತ್ತಿದ್ದಾನೆ. ಹೇಗೋ, ಇಸ್ರಾಯೇಲರ ದೇವರ ಮುಂದೆ ನಮ್ಮ ಸ್ಥಿತಿಯನ್ನು ನಾವು ಅರಿತುಕೊಳ್ಳದೇ ಹೋದರೆ, ದೇವರು ನಮಗೆ ಮಾಡಿದ್ದನ್ನು ನಾವು ಎಂದಿಗೂ ಪ್ರಶಂಶಿಸಲಾರೆವು. ಕ್ರಿಸ್ತನಲ್ಲಿ "ಒಳ್ಳೆಯ ವಾರ್ತೆ"ಗಾಗಿ ಸಿದ್ಧರಾಗುತ್ತಿರುವ ನಮಗೆ ಇದು "ಕೆಟ್ಟ ಸುದ್ದಿ" ಆಗಿದೆ. ನಮ್ಮ ಹಿಂದೆ ಗತ್ತಿಸಿಹೋದದ್ದನ್ನು ಪೌಲನು ಚರ್ಚಿಸಿದಂತೆ, ಆಥನು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಿಜವಾಗಿ ಇರಬೇಕಾದ ನಾಲ್ಕು ಲಕ್ಷಣಗಳನ್ನು ಇಟ್ಟಿದ್ದಾನೆ.

1. ನಾವು ಸತ್ತುಹೋಗಿದ್ದೇವೆ (2:1). ಆತನು ನಿಶ್ಚಯವಾಗಿ ನಮ್ಮ ಭೌತಿಕ ದೇಹದ ಬಗ್ಗೆ ಮಾತನಾಡುತ್ತಿಲ್ಲ, ಆದರೆ ಆತನು ನಮ್ಮ ಆತ್ಮವನ್ನು ಸೂಚಿಸುತ್ತಿದ್ದಾನೆ. ಅಂತರ್ಯದ ಮನುಷ್ಯನು ಸತ್ತಿದ್ದಾನೆ. ಏದೇನ್ ತೋಟದ ಹಣ್ಣಿನಲ್ಲಿ ಆದಾಮನು ಮುರಿದಾಗ, ಆತನ ಆತ್ಮನು ದೇವರ ಆತ್ಮದೊಡನೆಯ ಅನ್ಯನ್ಯವಾದ ಸಂಬಂಧವನ್ನು ಕಳೆದುಕೊಂಡಿತು. ಆತನ ಹಾಗೆಯೇ, ಪಾಪದ ಕಾರಣದಿಂದ, ನಮ್ಮಲ್ಲಿ ಎಲ್ಲರೂ ಆತ್ಮೀಕವಾಗಿ ಮರಣಿಸಿದ್ದಾರೆ.

ಮರಣಿಸಿದ ಮನುಷ್ಯನಿಗೆ ಹೆಚ್ಚಾಗಿ ಅವಶ್ಯವಾದದ್ದು ಯಾವುದು ಇದೆ? ಆತನಿಗೆ ಜೀವ ಬೇಕು! "ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ" ಎಂದು ಹೇಳಿದನು (ಯೋಹಾನ 11:26). ಮರಣವು ಒಬ್ಬನ ದೇಹದಿಂದ ಆತನ ಆತ್ಮವನ್ನು

ನಿಜವಾಗಿಯೂ ಬೇರೆಮಾಡದು, ಆದರೆ ದೇವರಿಂದ ಒಬ್ಬನ ಆತ್ಮವನ್ನು ಬೇರೆ ಮಾಡುವುದಾಗಿದೆ. ನಿತ್ಯದ ಜೀವಿತ ಎಂದರೆ ಕೇವಲ ಎಂದೆಂದಿಗೂ ಇರುವುದಿಲ್ಲ. ನರಕದಲ್ಲಿಯ ಆತ್ಮಗಳು ನಿರಂತರವಾಗಿ ಇರುವವು ಆಗಿವೆ. ಯೋಹಾನ 17:3 "ಸತ್ಯ ದೇವರಾದ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವುದೆ ನಿತ್ಯಜೀವವು" ಎಂದು ಹೇಳುತ್ತದೆ.

ಕ್ರಿಸ್ತನನ್ನು ಅರಿಯುವುದರಿಂದ ಮತ್ತು ಆತನೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿರುವುದಾಗಿದೆ. ನಿಜ ಜೀವಿತ ಬರುವುದಾಗಿದೆ. ನಮ್ಮ ಪಟ್ಟಣವು ಸತ್ತಮಂದೆಯಿಂದ ತುಂಬಿದ್ದಾಗಿದೆ; ಅವರು ಜೀವಿತದ ಒಂದೆ ಮೂಲವಾಗಿರುವ ಕ್ರಿಸ್ತನೊಂದಿಗೆ ಯಾವುದೆ ಸಂಬಂಧವನ್ನು ಹೊಂದದೆ ಇರುವುದರಿಂದ ಸತ್ತವರಾಗಿದ್ದಾರೆ.

2. ನಾವು ಆಳಲ್ಪಡುತೇವೆ (2:2). ಆಕಾಶ ರಾಜ್ಯದ ಅರಸರು ಯಾರು? ಆತನು ಸೈತಾನನೇ, ಭೂಮಿಯ ಮೇಲೆ ಆತ್ಮೀಕ ಮರಣದಲ್ಲಿ ನಡೆಯುವ ಸ್ತ್ರೀ ಪುರುಷರಿಗೆ ಪ್ರಸ್ತುತ ಮಾರ್ಗದರ್ಶಕನು ಆತನೇ.

ಆ ಮಾರ್ಗದ ಮೇಲಿರುವ ಹೆಚ್ಚಾದ ಜನರು "ನಾನು ಆಳಲ್ಪಟ್ಟಿಲ್ಲ, ನನಗೇನು ಬೇಕೋ ಅದನ್ನು ಮಾಡಲು ನಾನು ಸ್ವತಂತ್ರ್ಯನು" ಎಂದು ವಾದಿಸುತ್ತಾರೆ. ಆತನು ಏನು ಮಾಡಬೇಕೆಂದು ಬಯಸುತ್ತಾನೋ ಅದನ್ನು ಮಾಡಲು ಆತನು ಸ್ವತಂತ್ರ್ಯನೇ; ಸಮಸ್ಯೆಯೆಂದರೆ ಆತನು ಒಳ್ಳೆಯದನ್ನು ಮಾಡಲು ಬಯಸನು ಎಂಬುದೆ ನೈಜತ್ವದಲ್ಲಿ ಅವರು ಪಾಪಕ್ಕೆ ದಾಸರಾಗಿದ್ದಾಗ ಸೈತಾನನು ಜನರ ಹೃದಯದ ನಿಯಂತ್ರಣವನ್ನು ಗೆದ್ದಿದ್ದಾನೆ ಮತ್ತು ಸ್ವತಂತ್ರ್ಯರಾದ ಅವರು ಏನು ಮಾಡಬೇಕು ಎಂಬುದನ್ನು ಯೋಚಿಸುವಲ್ಲಿ ಅವರನ್ನು ವಂಚಿಸಿದ್ದಾನೆ.

3. ನಾವು ಅವಿಧೇಯರಾಗಿದ್ದೇವೆ (2:2). ಅವಿಧೇಯತೆಯ ಆತ್ಮವು ತೋಟದಲ್ಲಿಯೆ ಮಾನವನ ಮೂಲವಾದ ಸಮಸ್ಯೆಯು ಆಗಿತ್ತು. ದೇವರು ಆದಾಮ ಮತ್ತು ಹವ್ವಳಿಗೆ ಆಯ್ಕೆಯನ್ನು ಕೊಟ್ಟನು ಮತ್ತು ಅವರು ದೇವರ ವಿರುದ್ಧವಾದನ್ನು ಆರಿಸಿಕೊಂಡರು ಜನರು ಮೊಂಡತನದ ಅವಿಧೇಯತೆಯಲ್ಲಿ ಎಂದಿಗೂ ಜೀವಿಸುವವರಾಗಿದ್ದಾರೆ.

"ನಿನ್ನ ನೆರೆಯವನನ್ನು ಪ್ರೀತಿಸು" ಎಂದು ದೇವರು ಹೇಳಿದ್ದಾನೆ, ಆದರೆ ಜನರು ಒಬ್ಬರನ್ನು ಒಬ್ಬರು ದ್ವೇಶಿಸುತ್ತಿದ್ದಾರೆ. "ನಿನ್ನ ಹೆಂಡತಿಗೆ ನಂಬಿಗಸ್ತನಾಗಿರು" ಎಂದು ಹೇಳಿದ್ದಾನೆ ಆದರೆ ಪುರುಷನು ತನ್ನ ಹೆಂಡತಿಯನ್ನು ವಂಚಿಸುತ್ತಿದ್ದಾನೆ. ದೇವರು "ನನಗೆ ಮೊದಲು ಕೊಡು" ಎಂದು ಹೇಳುತ್ತಾನೆ ಆದರೆ ಜನರು ತಮಗೆ ಸಾಕಾದದ್ದನ್ನು ದೇವರಿಗೆ ಕೊಡುತ್ತಾರೆ. ಅವಿಧೇತೆಯಲ್ಲಿ ಮಾನವ ದಾಖಲೆಯನ್ನು ಮೆರೆದಿದ್ದಾನೆ.

4. ನಾವು ದೂಷಣೆಗೆ ಒಳಗಾಗಿದ್ದೇವೆ (2:3). ನಮ್ಮ ಮಾರ್ಗಗಳು ದುಷ್ಟತನದವು ಆಗಿರುವುದರಿಂದ, ಯಾವುದು ಒಳ್ಳೆಯದೆಂದು ತಿಳಿದಿದ್ದರೂ ಕೂಡಾ ನಾವು ಚಿತ್ತಪೂರ್ವಕವಾಗಿ ಅವಿಧೇಯರಾಗುತ್ತೇವೆ, ನಾವು ದೇವರ ಕೋಪದ ಅಡಿಯಲ್ಲಿ ಬರುತ್ತೇವೆ. ಸೃಷ್ಟಿಯ ಶುದ್ಧನೂ ಮತ್ತು ಪವಿತ್ರನೂ ಆದ ದೇವರ ಮುಂದೆ ನಿಸ್ಸಂಶಯವಾಗಿ ನಾವು ದೋಷಿಗಳಾಗುತ್ತೇವೆ. ದೇವರ ನ್ಯಾಯತೀರ್ಪಿಗೆ ಅನುಗುಣವಾಗಿ ನಿತ್ಯವಾಗಿ ದೇವರಿಂದ ದೂರ ಹೋಗಿ ದೋಷಣೆಯಲ್ಲಿ ನಿಲ್ಲುವವರಾಗುತ್ತೇವೆ. ನಮ್ಮ ಸ್ವಂತ ಕಾರ್ಯಗಳು ಮತ್ತು ನಿರ್ಧಾರದ ಮೂಲಕ, ನಾವು ನಿರೀಕ್ಷೆಯಿಲ್ಲದವರು ಆಗುತ್ತೇವೆ ಮತ್ತು ಸ್ವಂತ ಭಯಂಕರವಾದ ಯಾವುದೆ ವಿಧಿಯನ್ನು ನಿವಾರಿಸದೇ ಇರುವವರಾಗುತ್ತೇವೆ!

*ನಮ್ಮ ಪ್ರಸ್ತುತ.* ನಾವು ನಮ್ಮ ಕ್ರಿಯೆಗಳ ಮೂಲಕ ನಾವು ಏನು ಮಾಡುವವರಾಗುತ್ತೇವೆಯೋ ಅದು ಕೆಟ್ಟ ಸುದ್ಧಿಯಾಗಿದೆ. ಮುಂದೆ, ಪೌಲನು, ನಮ್ಮನ್ನು ನಮ್ಮ ಸಂಧಿಗ್ಧತೆಯಿಂದ ಹೊರತರಲು ದೇವರು ಮಾಡಿದಂಥ ಒಳ್ಳೆಯ ಕಾರ್ಯದೆಡೆಗೆ ತಿರುಗುತ್ತಾನೆ. ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ನಾವು ಮಾಡಿದಂಥದ್ದು ಯಾವುದೆ ರೀತಿಯಲ್ಲಿ ಒತ್ತಿಹೇಳಲ್ಪಟ್ಟಿಲ್ಲ; ಇದೆಲ್ಲವೂ ದೇವರ ಕಾರ್ಯವಾಗಿದೆ.

1. ನಾವು ಪುನರುತ್ಥಾನ ಹೊಂದಿರುವವರಾಗಿದ್ದೇವೆ (2:4, 5). ಸತ್ತ ಮನುಷ್ಯನಿಗೆ ಜೀವವು ಮರಳಿಕೊಡಲ್ಪಡುವದು, ಇದು ಕೃಪೆಯ ಮೂಲಕವೇ ಸಂಭವಿಸುವುದಾಗಿದೆ. ಆತನು ತನಗಾಗಿ ಏನು ಮಾಡಿದ್ದಾನೆ? ಏನೂ ಇಲ್ಲ! ಆತನಿಗಾಗಿ ಬೇರೊಬ್ಬನು ಮಾಡಿದ್ದಾನೆ. ಅಂತೆಯೇ ರಕ್ಷಣೆಯು ಕೃಪೆಯ ಮೂಲಕವೇ ಆಗಿದೆ. ದೇವರು ಮಾನವನಿಗೆ ರಕ್ಷಣೆಯನ್ನು ಒದಗಿಸಿದ್ದಾದರೆ, ಅಲ್ಲಿ ಏನೂ ಮಾಡಬೇಕಾಗಿಲ್ಲ ಎಂಬುದು ಸರಳವಾಗಿದೆ.

ಸತ್ತ ಮನುಷ್ಯನು ಹೇಗೆ ಜೀವಿತವನ್ನು ಪಡೆಯುವನು? ಇದು ಉದಾಹರಣೆಯ ಮೂಲಕ *ಮಾಡಲ್ಪಡಬಹುದೇ?* ಶವದ ಮುಂದೆ ಓಡುತ್ತಾ ಅಥವಾ ಜಿಗಿಯುತ್ತಾ "ಜೀವಿತ ವ್ಯಕ್ತಿಗಳು ಮಾಡುವ ರೀತಿಯು ಇದೆ" ಎಂದು ಹೇಳಬಹುದೆ? ಇಲ್ಲ. ಸತ್ತ ಮನುಷ್ಯನ ಸಮಸ್ಯೆಯನ್ನು ಪರಿಹರಿಸಲು ಉತ್ತಮ ಉದಾಹರಣೆ ಸಾಕಷ್ಟಾಗದು! ಆತ್ಮೀಕವಾಗಿ ಎರಡರಲ್ಲಿ ಯಾವುದಾದರೂ ಮರಣದಲ್ಲಿ ಬದಲಾವಣೆಯು ಸಾಕಷ್ಟಾಗದು.

ಪರಿಸರದ ಬಗೆಗೆ ಏನು? ಸಮೃದ್ಧಿಯಲ್ಲಿ ಹೇಗೆ ಜೀವಿಸಬೇಕೆಂದು ತಿಳಿದಂಥ ಪಟ್ಟಣದ ಉತ್ತಮವಾದ ಭಾಗದ ಜನರ ಹತ್ತಿರ ಆತನನ್ನು ನಾವು ತೆಗೆದುಕೊಂಡು ಹೋಗಬಹುದು. ಹೇಗೋ ಅದು ಆತನಿಗೆ ಜೀವವನ್ನು ಮರಳಿತರಲಾರದು.

ಇನ್ನೊಂದು ಆಯ್ಕೆಯೆಂದರೆ ಪ್ರೋತ್ಸಾಹಿಸಲು ಪ್ರಯತ್ನಿಸುವುದು ಆಗಿದೆ. ನಾವು ಆತನೊಡನೆ ಮಾತನಾಡಬಹುದು. ಚೆನ್ನಾಗಿ ಬಲ್ಲಂತ ಪ್ರೇರಣಾತ್ಮಕ ಮಾತುಗಾರನು ಬಂದು ಆತನಿಗೆ "ಎದ್ದೇಳು! ನೀನು ಇದನ್ನು ಮಾಡಬಲ್ಲೆ! ಸಕರಾತ್ಮಕವಾಗಿ ಯೋಚಿಸು!" ಎಂದು ಸವಾಲನ್ನು ಮಾಡಬಹುದು.

ಇವುಗಳಲ್ಲಿ ಯಾವುದೇ ವಿಚಾರವು *ಯಶಸ್ವಿಯಾಗದೆ* ಇರಬಹುದು. ಸತ್ತ ಮನುಷ್ಯನಿಗೆ ಅವಶ್ಯವಿರುವದು ಜೀವಿತ! ಯಾವುದೇ ದಿವ್ಯ ಪುನರುತ್ಥಾನವು ನಮ್ಮ ನೈಜ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ. ದೇವರು ಕೆಳಗೆ ಇಳಿದುಬರುವನು ಮತ್ತು ನಮ್ಮ ಆತ್ಮಗಳಲ್ಲಿ ವಾಸಿಸುವನು. ಕ್ರಿಸ್ತನು "ನಾನೆ ... ಜೀವವಾಗಿದ್ದೇನೆ" ಎಂದು ಹೇಳಿದನು (ಯೋಹಾನ 11:25). ಸತ್ತ ಮನುಷ್ಯನಿಗೆ ಅತೀಹೆಚ್ಚಾಗಿ ಕ್ರಿಸ್ತನ ಅವಶ್ಯಕತೆಯು ಇರುತ್ತದೆ.

ಕ್ರೈಸ್ತತ್ವವು ರೋಗಿಯು ಸ್ವಸ್ಥವಾಗುವುದಕ್ಕೆ ಅಲ್ಲ. ಇದು ಸತ್ತ ಮನುಷ್ಯನು ಜೀವವನ್ನು ಪಡೆಯುವುದೇ ಆಗಿದೆ. ದೇವರ ಕೃಪೆಯ ಐಶ್ವರ್ಯದಿಂದ, ನಾವು ಹೊಸಜೀವಿತವನ್ನು ಪಡೆಯುವವರು ಆಗಿರುತ್ತೇವೆ. ನಾವು ಮರಣದಿಂದ ಕ್ರಿಸ್ತನ ಜೊತೆಯಲ್ಲಿ ಎಬ್ಬಿಸಲ್ಪಟ್ಟಿದ್ದೇವೆ.

2. ನಮಗೆ ವಿಶ್ರಾಂತಿಯು ಕೊಡಲ್ಪಟ್ಟಿದೆ (2:6). ಸತ್ಯವೇದದಲ್ಲಿ ಪ್ರತಿನಿಧಿಗಳಾಗಿ ಕೂತುಕೊಳ್ಳುವ ವಿಚಾರವು ಸಂಪೂರ್ಣವಾದ ಕಾರ್ಯವಾಗಿದೆ. ಉದಾಹರಣೆಗೆ ಇಬ್ರಿಯ ಪುಸ್ತಕದ ಲೇಖಕನು ಯಾಜಕತ್ವದ ಪುರೋಹಿತರ ಮೇಲೆ ಕ್ರಿಸ್ತ ಸೇವೆಯ ಶ್ರೇಷ್ಟತೆಯನ್ನು ಎತ್ತಿತೋರಿಸಿದ್ದಾನೆ: "ಇದ್ದಲ್ಲದೆ ಯಾಜಕರೆಲ್ಲರೂ ದಿನಾಲು ಸೇವೆ ಮಾಡುತ್ತಾ ಎಂದಿಗೂ ಪಾಪನಿವಾರಣೆ ಮಾಡಲಾರದಂಥ ಒಂದೆ ವಿಧವಾದ ಯಜ್ಞಗಳನ್ನು ಪದೆ ಪದೇ ಸಮರ್ಪಿಸುತ್ತಾ ನಿಂತುಕೊಂಡಿರುವರು. ಆದರೆ ಈ ಯಾಜಕನು [ಕ್ರಿಸ್ತನು] ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ *ಕೂತುಕೊಂಡನು*" (ಇಬ್ರಿಯ 10:11, 12; ಒತ್ತಿ ಹೇಳಿದ್ದು ಸೇರಿಸಲಾಗಿದೆ).

ರಕ್ಷಣೆಯನ್ನು ಒದಗಿಸುವಲ್ಲಿ ಯೇಸುವಿನ ಕಾರ್ಯವು ಶಿಲುಬೆಯ ಮೇಲೆ ಸಂಪೂರ್ಣವಾಗಿದೆ, ಹಾಗಾಗಿ, ಆತನು ದೇವರ ಬಲಗಡೆಯಲ್ಲಿ ಕೂತುಕೊಂಡಿದ್ದಾನೆ. ನಮ್ಮ ಬಿಡುಗಡೆಯಲ್ಲಿ ಮತ್ತು ಬಾಧ್ಯತೆಯನ್ನು ಭಧ್ರವಾಗಿಸಲು ಆತನಿಗೆ ಏನೂ ಉಳಿದಿಲ್ಲ. ಆತನ ಬಿಡುಗಡೆಯ ಕಾರ್ಯವು ಮಾಡಲ್ಪಟ್ಟಿದೆ; ಈಗ ಆತನು ನಮ್ಮ ನಿತ್ಯಜೀವವನ್ನು ಕೊಳ್ಳುವುದರಿಂದ ವಿಶ್ರಾಂತಿಯಲ್ಲಿದ್ದಾನೆ.

ನಾವು ಈಗ ಯೇಸುವಿನೊಡನೆ ಪರಲೋಕರಾಜ್ಯದಲ್ಲಿ ಕೂತುಕೊಳ್ಳುವವರಾಗಿದ್ದೇವೆ ಎಂದು ಪೌಲನು ಘೋಷಿಸುವವನಾಗಿದ್ದಾನೆ. ನಾವು ಕಾತುರತೆಯಿಂದ ಪರಲೋಕದಲ್ಲಿ

ನಮ್ಮ ಸ್ಥಳವನ್ನು ಕಾದುಕೊಳ್ಳಲು ಪ್ರಯತ್ನಿಸುವ ಅವಶ್ಯಕತೆಯು ನಮಗೆ ಇಲ್ಲ. ಯೇಸುವಿನ ನಿತ್ಯಜೀವಿತವು ಯಾವಾಗಲೂ ನಮ್ಮದಾಗಿದೆ. "ತೀರಿತು" ಎಂದು ಹಿಂದೆಯೇ ಕೂಗಿದವನಲ್ಲಿ ನಾವು ಉಳಿದಿದ್ದೇವೆ. ದೇವರ ಕೃಪೆಯಿಂದ, ನಮ್ಮ ಕೃಪೆಯು ಕೃಜೆಯ ಮೇಲೆ ಧೃಢವಾಗಿದೆ.

*ನಮ್ಮ ನಿರೀಕ್ಷಣೆ.* ನಮ್ಮ ರಕ್ಷಣೆಯು ಸಂಪೂರ್ಣತೆಯ ಜೊತೆಯಲ್ಲಿ, ನಾವು ದೇವರ ಬಹುಮಾನವಾಗುತ್ತೇವೆ. "ತನ್ನ ಅಪರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಎಬ್ಬಿಸಿ ..." (2:7). ನಿತ್ಯತ್ವದ ಮುಂದಣ ಯುಗದಲ್ಲಿ, ಬಿಡುಗಡೆಗೊಂಡವರು ಪರಲೋಕಗಲ್ಲಿರುವವರ ಮುಂದೆ ದೇವರ ಅಗಾಧ ಕೃಪೆಯ ಬಹುಮಾನಗಳಂತೆ ಕಾಣಿಸಲ್ಪಡುವರು. ದೇವದೂತರು ದೇವರ ಕೃಪೆಯ ಶ್ರೇಷ್ಟತೆಯಲ್ಲಿ ಮೀರಿ ಕಾಣಿಸಿಕೊಳ್ಳುವರು ಅಸಾಧಾರಣವಾಗಿರುವರು. ನಮ್ಮ ಪರಿಶುದ್ಧ ದೇವರು ನಾವಿರುವಂತೆಯೇ ಪರಿಶುದ್ಧರಾದ ನಮ್ಮನ್ನು ರಕ್ಷಿಸಲು ಮಾರ್ಗವನ್ನು ಕಂಡುಹಿಡಿಯುವನೆಂದು ಭೀತಿಯಿಂದ ನಿಂತಿರುವರು (ಪ್ರಕಟಣೆ 7:9-12).

1. ದೇವರ ಯೋಜನೆ (2:8, 9). ದೇವರ ಮಹಿಮೆಯನ್ನು ತರುವ ನಿತ್ಯದ ಪ್ರದರ್ಶನಗಳು ನಾವಾಗಿದ್ದಾದರೆ, ಆಗ ಯಾರೊಬ್ಬರಿಂದಲೂ ಹೊಗಳಿಕೊಳ್ಳುವುದಕ್ಕೆ ಆಸ್ಪದವಾಗದಂತೆ ನಮ್ಮ ರಕ್ಷಣೆಯನ್ನು ಸಂಪೂರ್ಣಗೊಳಿಸುವ ಯೋಜನೆಯನ್ನು ಆತನು ಹೊಂದಿಯೇ ಇದ್ದಾನೆ. ಆತನ ಯೋಜನೆಯು ಯಾವದು? ಪೌಲನು ಹೀಗೆ ಹೇಳುತ್ತಾನೆ "*ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ.* ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದುದರಿಂದ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ" (2:8, 9; ವಿವರಣೆಗೆ ಸೇರಿ ಸಲಾಗಿದೆ).

ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ ಎಂಬುದರ ಅರ್ಥವೇನು? ಯಾರೋ ಒಬ್ಬನನ್ನು ದೇವರು ರಕ್ಷಿಸಲಿಲ್ಲ ಎಂದು ಇದರ ಅರ್ಥವಾಗಿದೆ. ಆತನು ನಮ್ಮನ್ನು ಮರಣಕ್ಕೆ ಒಪ್ಪಿಸಲಿಲ್ಲ ಮತ್ತು ನಿತ್ಯದ ನರಕಕ್ಕೆ ಹೋಗಲು ಕೊಡಲಿಲ್ಲ, ಮತ್ತು ಆತನು ತಿರುಗಿ ಪರಿಶುದ್ಧನಾಗಿಯೇ ಉಳಿದನು. ಯಾಕೆಂದರೆ ಆತನು ನಮ್ಮನ್ನು ಪ್ರೀತಿಸುವವನಾಗಿದ್ದಾನೆ, ಆತನು ಯಾವುದನ್ನು ಮಾಡಲು ನಿರ್ಬಂಧಪಡಿಸದೆ ನಮಗೋಸ್ಕರ ಮಾಡಲು ಆತನು ಉಚಿತವಾಗಿ ಆರಿಸಿಕೊಂಡಿದ್ದಾನೆ. ಕೃಪೆಯು ಮನುಷ್ಯನು ತನಗೋಸ್ಕರ ಯಾವುದನ್ನು ಮಾಡಲಾರನೋ ಅದನ್ನು ಮನುಷ್ಯರಿಗೋಸ್ಕರ ಮಾಡುವ ದೇವರ ಸ್ವತಂತ್ರ್ಯ ನಿರ್ಧಾರ ಪರಿಣಾಮವಾಗಿದೆ.

ನಂಬಿಕೆಯ ವಿಧೇಯತೆಯ ಪ್ರತಿಕ್ರಯೆಯು ಒಂದೇ ಅವಶ್ಯಕತೆಯು ಆಗಿದೆ. ನಾವು ದೇವರ ರಕ್ಷಣೆಯ ಯೋಜನೆಯನ್ನು ಒಪ್ಪಿಕೊಳ್ಳಬೇಕು, ಅದನ್ನು ನಂಬುತ್ತಾ ಆಯೋಜನೆಗೆ ವಿಧೇಯಚೆಯಿಂದ ಪ್ರತಿಕ್ಕಿಯೆಸುವಾಗ, ದೇವರು ನಮ್ಮನ್ನು ಕ್ಷಮಿಸುತ್ತಾನೆ ಮತ್ತು ನಮಗೆ ಹೊಸ ಜೀವಿತವನ್ನು ಕೊಡುತ್ತಾನೆ.

ನಮಗೆ ಸ್ವೀಕರಿಸಲು ದೇವರು ಕೇಳುತ್ತಿರುವ ಯೋಜನೆಯು ಯಾವದು? "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿ" ಎಂದು (ಅಪೊಸ್ತಲರ ಕೃತ್ಯಗಳು 2:38) ಪೇತ್ರನಿಂದ ಸುವಾರ್ತೆಯು ಪ್ರಕಟಿಸಲ್ಪಟ್ಟಾಗಿ ಅಂದಿನ ಪಂಚಾಶತ್ತಮದಿನದಂತೆ ಅದೇ ದಿನವಾಗಿದೆ.

ದೇವರ ಯೋಜನೆಯು ಆತನ ಕೃಪೆಯಿಂದ ಉತ್ಪತ್ತಿಯಾದದ್ದು ಆಗಿದೆ. ಇದನ್ನು ನಾವು ನಂಬಿಕೆಯ ಮೂಲಕ ಅನುಸರಿಸಿದಾಗ ಅದು ನಮ್ಮ ಜೀವಿತದಲ್ಲಿ ನೈಜತೆಯನ್ನು ತಂದುಕೊಳ್ಳುವದು.

2. ದೇವರ ಉದ್ದೇಶ (2:10). ದೇವರ ಕೃಪೆಯ ಬಹುಮಾನ ತೋರ್ಪಡುವ ಸಮಯಕ್ಕಾಗಿ ಕಾಯುತ್ತಿರುವಾಗ, ನಾವು ಏನು ಮಾಡುತ್ತಿರಬೇಕು? "ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" (2:10).

ನಾವು ನಮ್ಮ ಸತ್ಕಾರ್ಯಗಳ ಮೂಲಕ ರಕ್ಷಿಸಲ್ಪಟ್ಟಿಲ್ಲ. ಚರ್ಚೆಗೆ ಹಾಜರಾಗುವದು, ಪ್ರವಾರ ಕರ್ತನ ಭೋಜನವನ್ನು ಆಚರಿಸುವದು, ಹತ್ತು ಆಜ್ಞೆಗಳನ್ನು ಪಾಲಿಸುವದು, ಒಳ್ಳೆಯ ನೆರೆಯವನಾಗಿರುವದು, ಮತ್ತು ನೈತಿಕ ಗೌರವಯುತ್ತ ಜೀವಿತವನ್ನು ನಡೆಸುವದು, ಅವುಗಳು ನಮ್ಮನ್ನು ಪರಲೋಕವನ್ನು ಕೊಡಿಸಲಾರವು. ಅಂದರೆ, ಹೇಗೋ, ನಾವು ಒಳ್ಳೆಯ ಕಾರ್ಯವನ್ನು ಮಾಡುವುದನ್ನು ದೇವರು ಬಯಸಲಾರನು ಎಂದು ಇದರ ಅರ್ಥವಲ್ಲ.

ವಾಸ್ತವವಾಗಿ, ದೇವರು ನಾವು ಒಳ್ಳೆಯಕಾರ್ಯಗಳನ್ನು ಮಾಡಬೇಕೆಂಬ ನಿಟ್ಟಿನಲ್ಲಿ ನಮ್ಮನ್ನು ರಕ್ಷಿಸಿದನು ಎಂದು ವಚನ 10 ಹೇಳುತ್ತದೆ. ಎಫೆಸ 4-6ರಲ್ಲಿ, ಪೌಲನು ನಾವು ಮಾಡಬಹುದಾದ ಒಳ್ಳೆಯಕಾರ್ಯಗಳ ಬಗ್ಗೆ ಹೇಳಿದ್ದಾನೆ. ನಮ್ಮ ಮನಕ್ಕೆ ಹಿಡಿಸಿದ ರೀತಿಯಲ್ಲಿ ಜೀವಿಸುವುದಕೋಸ್ಕರ ದೇವರು ನಮಗೆ ಹೊಸ ಜೀವಿತವನ್ನು ಕೊಡಲಿಲ್ಲ. ನಾವು ಆತನಿಗೆ ಮಹಿಮೆಯನ್ನು ತರಬೇಕೆಂದು ಆತನು ನಮಗೆ ಹೊಸಜೀವಿತವನ್ನು ಕೊಟ್ಟನು. ನಾವು ಆತನ ಕೃಪೆಯ ಬಹುಮಾನವಾಗಿರುವುದಕ್ಕೆ ಇದೇ ಕಾರಣವಾಗಿದೆ.

*ಸಮಾರೋಪ.* ಏನೇ ಆಗಲಿ, ಪ್ರತಿಯೊಬ್ಬರೂ ಮತ್ತೊಬ್ಬರೂ ಬಹುಮಾನವಾಗಿದ್ದೇವೆ. ಒಬ್ಬನು ದೇವರ ವಿರುದ್ಧ ತಿರುಗಿಬೀಳುವುದಕ್ಕೆ ಹಠಮಾಡಿ ಮತ್ತು ಈ ಜೀವಿತವನ್ನು ಬಿಟ್ಟು ಪಾಪದಲ್ಲಿ ಸತ್ತು ಸೈತಾನನ ತಂತ್ರದ ಬಹುಮಾನದಂತೆ ನಿತ್ಯತ್ವದ ನರಕದಲ್ಲಿ ಕಳೆಯುವವನಾಗಿದ್ದಾನೆ. ಇದಕ್ಕೆ ವ್ಯತ್ಯಾಸವಾಗಿ, ಕ್ರಿಸ್ತನಿಗೆ ನಂಬಿಕೆಯಲ್ಲಿ ಪ್ರತಿಕ್ರಯಿಸುವ ವ್ಯಕ್ತಿಯು ದೇವರ ಕೃಪೆಯ ರಕ್ಷಣಾ ಬಹುಮಾನವಾಗಿದ್ದಾನೆ. Chris Bullard

ಟಿಪ್ಪಣೆಗಳು

[1]Kenneth S. *Wuest, Wuest's Word Studies from the Greek New Testament for the English Reader: Ephesians and Colossians* (Grand Rapids, Mich.: Wm. B. Eerdmans Publishing Co., 1953), 65. [2]William Barclay, *More New Testament Words* (New York: Harper & Brothers, 1958), 11-24. [3]Ibid., 21. [4]Wuest, 66. [5]Spiros Zodhiates, ed., *The Complete Word Study New Testament*, 2d ed. (Chattanooga, Tenn.: AMG Publishers, 1992), 967. [6]Andrew T. Lincoln, *Ephesians*, Word Biblical Commentary, vol. 42 (Dallas: Word Books, 1990), 110. [7]Ibid. [8]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 95. [9]C. G. Wilke and Wilibald Grimm, *A Greek-English Lexicon of the New Testament,* trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 511; see also Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 816-18.